**ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ (ನೇಮಕಾತಿ ಮತ್ತು ಸೇವಾ ಷರತ್ತುಗಳು) ವಿನಿಯಮಗಳು, 2000**

## 1. ಶೀರ್ಷಿಕೆ ಆರಂಭ ಮತ್ತು ಅರ್ಜಿ

(1) ಈ ವಿನಿಯಮಗಳನ್ನು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ (ನೇಮಕಾತಿ ಮತ್ತು ಸೇವಾ ಷರತ್ತುಗಳು) ವಿನಿಯಮಗಳು, 2000 ಎಂದು ಕರೆಯತಕ್ಕದ್ದು.

(2) ಈ ವಿನಿಯಮಗಳು, ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

(3) ವಿನಿಯಮ 3ರಲ್ಲಿ ಸೂಚಿಸಿರುವಂತೆ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದಲ್ಲಿ ಸೇವೆ ಸಲ್ಲಿಸುತ್ತಿರುವ ಎಲ್ಲಾ ವ್ಯಕ್ತಿಗಳಿಗೆ ಈ ವಿನಿಯಮಗಳು ಅನ್ವಯವಾಗುತ್ತದೆ.

## 2. ಪರಿಭಾಷೆಗಳು

ಈ ವಿನಿಯಮಗಳಲ್ಲಿ, ಸಂದರ್ಭಕ್ಕೆ ಅನ್ಯತಾ ಅರ್ಥವಿಲ್ಲದ ಹೊರತು: -

(a) "ಅಧಿನಿಯಮ" ಎಂದರೆ ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾ ಅಧಿನಿಯಮ 1999 (1999ರ ಕರ್ನಾಟಕ ಅಧಿನಿಯಮ 25)

(b) “ನೇಮಕಾತಿ ಪ್ರಾಧಿಕಾರ” ಎಂದರೆ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ.

(c) “ಸಕ್ಷಮ ಪ್ರಾಧಿಕಾರ” ಎಂದರೆ ಅಧ್ಯಕ್ಷರು ಮತ್ತು ಈ ಉದ್ದೇಶಕ್ಕಾಗಿ ಆಯೋಗದಿಂದ ಕಾಲದಿಂದ ಕಾಲಕ್ಕೆ ನಿಯೋಜಿಸಲ್ಪಟ್ಟ ಆಯೋಗದ ಇತರೆ ಅಧಿಕಾರಿ ಅಥವಾ ಅಧಿಕಾರಿಗಳು;

(d) “ಅಧ್ಯಕ್ಷರು” ಅಂದರೆ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಅಧ್ಯಕ್ಷರು;

(e) “ಸದಸ್ಯ” ಅಂದರೆ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಸದಸ್ಯರು;

(f) “ಕಾರ್ಯದರ್ಶಿ” ಅಂದರೆ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಕಾರ್ಯದರ್ಶಿ;

(g) “ಕಾರ್ಯ” ಎಂದರೆ ಸಂಬಂಧಿತ ಕಾರ್ಯಚಟುವಟಿಕೆಗಳನ್ನು ಒಳಗೊಂಡಂತೆ ಆಯೋಗದ ಎಲ್ಲಾ ಕೆಲಸಗಳು;

(h) “ಸೇವೆ” ಎಂದರೆ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಸೇವೆ;

(i) “ವರ್ಷ” ಎಂದರೆ ಕ್ಯಾಲೆಂಡರ್ ವರ್ಷ; ಮತ್ತು

(j) ಈ ವಿನಿಯಮಗಳ್ಲಿ ಪರಿಭಾಷಿಸದಿರುವ ಪದ ಮತ್ತು ಪದಾವಳಿಗಳು “ಅಧಿನಿಯಮ” ದಲ್ಲಿ ಅಥವಾ ಕರ್ನಾಟಕ ನಾಗರೀಕ ಸೇವಾ ಅಧಿನಿಯಮ 1978 ರಲ್ಲಿ ಅನುಕ್ರಮವಾಗಿ ನಿಗದಿ ಮಾಡಿದ ಅರ್ಥವನ್ನು ಹೊಂದಿರುತಕ್ಕದ್ದು.

## 3. ಆಯೋಗದ ಸಿಬ್ಬಂದಿ ಬಲ

ಆಯೋಗವು ಸ್ಥಾಪನೆಯಾದ ಸಂದರ್ಭದಲ್ಲಿ ಸ್ಥಾಪಿಸಿದ ಹುದ್ದೆಗಳ ಹೆಸರು, ಸಿಬ್ಬಂದಿ ಬಲ ಮತ್ತು ವೇತನ ಶ್ರೇಣಿಯು ಮೊದಲ ಅನುಸೂಚಿಯ ಕಾಲಂ (2), (3) ಮತ್ತು (4) ರಲ್ಲಿ ನಿಗದಿಪಡಿಸಿರುವಂತೆ ಇರತಕ್ಕದ್ದು.

## 4. ನೇಮಕಾತಿ ವಿಧಾನ

1) ಈ ಕೆಳಗೆ ಹೆಸರಿಸಲಾದ ನೇಮಕಾತಿ ವಿಧಾನವನ್ನು ಆಯೋಗದ ನೇಮಕಾತಿಗಾಗಿ ಅನುಸರಿಸತಕ್ಕದ್ದು:

(i) ಸರ್ಕಾರಿ ಇಲಾಖೆಗಳು (ರಾಜ್ಯ ಮತ್ತು ಕೇಂದ್ರ) ಅಥವಾ ಇತರ ರಾಜ್ಯ ಅಥವಾ ಕೇಂದ್ರ ಸರ್ಕಾರದ ಸಂಸ್ಥೆಗಳಿಂದ ನಿಯೋಜನೆ. ನಿಯೋಜನೆಯ ವಿಚಾರದಲ್ಲಿ, ಮೊದಲ

ಅನುಸೂಚಿಯಲ್ಲಿ ಸೂಚಿಸಿರುವ ಹುದ್ದೆಗಿಂತ ಕಡಿಮೆ ಅಥವಾ ಅಧಿಕ ವೇತನ ಶ್ರೇಣಿಯ ಹುದ್ದೆಯನ್ನು ಹೊಂದಿದ್ದಲ್ಲಿ, ನಿಗದಿಪಡಿಸಿದ ಅರ್ಹತೆಗಳು ಮತ್ತು ಸೂಕ್ತತೆಯನ್ನು ಆಧರಿಸಿ ಆ ವ್ಯಕ್ತಿಯನ್ನು ಪರಿಗಣಿಸಬಹುದು. ಆಯೋಗದಲ್ಲಿ ನಿಯೋಜನೆಯ ಮೇಲೆ ಕೆಲಸ ಮಾಡುವ ವ್ಯಕ್ತಿಗಳನ್ನು, ಪೂರ್ಣಕಾಲಿಕವಾಗಿ ವಿಲೀನಗೊಳಿಸಲು, ಈ ನಿಟ್ಟಿನಲ್ಲಿ ಕರ್ನಾಟಕ ಸರ್ಕಾರದಲ್ಲಿ ಅನ್ವಯವಾಗುವ ನಿಯಮಗಳಿಗೆ ಒಳಪಟ್ಟು ಪರಿಗಣಿಸಬಹುದು. ಅಥವಾ

(ii) ಗುತ್ತಿಗೆ ಆಧಾರದ ಮೇಲೆ;

(iii) ಸ್ಪರ್ಧಾತ್ಮಕ ಪರೀಕ್ಷೆ ಅಥವಾ ಆಯ್ಕೆಯ ಮೂಲಕ ನೇರ ನೇಮಕಾತಿಯ ಮೇಲೆ.

2) ವಿನಿಯಮಗಳು – 3 ರಲ್ಲಿ ಏನನ್ನೂ ಹೇಳದೆ ಇದ್ದರೂ ಸಹ, ಆಯೋಗವು ಎಲ್ಲಾ ಸಮಯದಲ್ಲೂ, ಎಲ್ಲಾ ವಿಭಾಗಗಳು ಅಥವಾ ಹುದ್ದೆಗಳಲ್ಲಿ ಅಗತ್ಯವಾದ ಸಿಬ್ಬಂದಿಯನ್ನು ಹೊಂದಿರತಕ್ಕದ್ದು.

## 5. ನೇಮಕಾತಿ ವಿಧಾನ ಮತ್ತು ಕನಿಷ್ಠ ವಿದ್ಯಾರ್ಹತೆ

ಈ ವಿನಿಯಮಗಳಿಗೆ ಅನುಬಂಧಿಸಿದ ಎರಡನೇ ಅನುಸೂಚಿಯ ಕಾಲಂ (2) ರಲ್ಲಿ ನಿರ್ದಿಷ್ಟಪಡಿಸಿದ ಪ್ರತಿಯೊಂದು ವರ್ಗದ ಹುದ್ದೆಗಳಿಗೆ ಸಂಬಂಧಿಸಿದಂತೆ, ನೇಮಕಾತಿ ವಿಧಾನ ಮತ್ತು ಕನಿಷ್ಠ ವಿದ್ಯಾರ್ಹತೆಯು ಕಾಲಂ (3) ಮತ್ತು (4) ರಲ್ಲಿನ ಅನುಗುಣವಾದ ನಮೂದುಗಳಲ್ಲಿ ಅನುಕ್ರಮವಾಗಿ ನಿರ್ದಿಷ್ಟಪಡಿಸಿದಂತೆ ಇರತಕ್ಕದ್ದು.

## 6. ವಯೋಮಿತಿ

ವಿನಿಮಯ 3ರಲ್ಲಿನ, ಕ್ರಮಸಂಖ್ಯೆ 1 ರಿಂದ 18ರ ವರೆಗಿನ ಹುದ್ದೆಗಳಿಗೆ ಪೂರ್ಣಕಾಲಿಕ ಆಯ್ಕೆಗಾಗಿ ವಯಸ್ಸಿನ ಮಿತಿಗಳು ಮತ್ತು ನಿವೃತ್ತಿಯ ವಯಸ್ಸು ಕರ್ನಾಟಕ ಸರ್ಕಾರವು ಕಾಲದಿಂದ ಕಾಲಕ್ಕೆ ಮಾರ್ಪಾಡುಗೊಳಿಸುವ ನಿಯಮಗಳಂತೆ ಇರತಕ್ಕದ್ದು. ಗುತ್ತಿಗೆ ಆಧಾರಿತ ನೇಮಕಾತಿಗಳು ಸಾಮಾನ್ಯವಾಗಿ ಗರಿಷ್ಠ ಮೂರು ವರ್ಷಗಳ ಅವಧಿಗೆ ಇದ್ದು, ವಾರ್ಷಿಕವಾಗಿ ನವೀಕರಿಸಬಹುದಾಗಿದೆ.

## 7. ಮೀಸಲಾತಿ

ಆಯೋಗದ ಸೇವೆಗಳಿಗೆ ಮಾಡುವ ನೇಮಕಾತಿಯು ಇತರೆ ಸರ್ಕಾರಿ ಇಲಾಖೆಗಳು, ಮಂಡಳಿಗಳು, ನಿಗಮಗಳು ಮತ್ತು ಸ್ವಾಯತ್ತ ಸಂಸ್ಥೆಗಳಲ್ಲಿರುವ ಇದೇ ರೀತಿಯ ಸೇವೆಗಳಿಗೆ ಅನುರೂಪವಾಗಿ ಅನ್ವಯವಾಗುವಂತೆ ಕರ್ನಾಟಕ ಸರ್ಕಾರದ ಮೀಸಲಾತಿ ನೀತಿಗೆ ಅನುಗುಣವಾಗಿರುತ್ತದೆ.

## 8. ಗುತ್ತಿಗೆ ಆಧಾರದ ಮೇಲೆ ಅಥವಾ ನೇರ ನೇಮಕಾತಿಯ ಮೂಲಕ ನೇಮಕಾತಿ ಪ್ರಕ್ರಿಯೆ

(1) ಒಪ್ಪಂದ ಅಥವಾ ನೇರ ನೇಮಕಾತಿಯ ಮೂಲಕ ಭರ್ತಿ ಮಾಡಬೇಕಾದ ಖಾಲಿ ಹುದ್ದೆಗಳ ಸಂಖ್ಯೆಗೆ ಸರಿಹೊಂದುವಂತೆ ಆಯೋಗವು, ಸೂಕ್ತವೆಂದು ಭಾವಿಸುವ ರೀತಿಯಲ್ಲಿ ಪ್ರಕಟಣೆ ನೀಡಬಹುದು ಮತ್ತು ಹುದ್ದೆಗಳ ನೇಮಕಾತಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಬಹುದು.

(2) ಪ್ರತಿಯೊಬ್ಬ ಅಭ್ಯರ್ಥಿಯು ತನ್ನ ಅರ್ಜಿಯನ್ನು, ನಿಗದಿತ ಶುಲ್ಕ ಮತ್ತು ಅಗತ್ಯ ದಾಖಲೆಗಳೊಂದಿಗೆ ನಿಗದಿತ ನಮೂನೆಯಲ್ಲಿ ಕಾರ್ಯದರ್ಶಿಗೆ ಅಥವಾ ಆಯೋಗದ ಯಾವುದೇ ನಿಯೋಜಿತ ಅಧಿಕಾರಿಗೆ ನಿಗದಿತ ದಿನಾಂಕದೊಳಗೆ ತಲುಪುವಂತೆ ಸಲ್ಲಿಸಬೇಕು.

(3) ಅರ್ಜಿಯ ಜೊತೆ ನಿಗದಿತ ಮೊತ್ತದ ಡಿಮಾಂಡ್ ಡ್ರಾಫ್ಟ್‌ನ್ನು ಲಗತ್ತಿಸತಕ್ಕದ್ದು.

(4) ಅರ್ಜಿಯ ಜೊತೆ ಈ ಕೆಳಗಿನ ದಾಖಲೆಗಳನ್ನು ಸಲ್ಲಿಸತಕ್ಕದ್ದು:

a) ಅಗತ್ಯವಾದ ಶೈಕ್ಷಣಿಕ ಅರ್ಹತೆಯನ್ನು ಹೊಂದಿದ್ದಾರೆ ಎಂಬುದಕ್ಕೆ ಪುರಾವೆ.

b) ಅಭ್ಯರ್ಥಿಗಳು ಈ ಹಿಂದೆ ರಾಜ್ಯ / ಕೇಂದ್ರ ಸರ್ಕಾರ / ಸಾರ್ವಜನಿಕ ವಲಯದ ಉದ್ಯಮಗಳಲ್ಲಿ ಯಾವುದೇ ಸಾಮರ್ಥ್ಯದಲ್ಲಿ ಸೇವೆ ಸಲ್ಲಿಸದ ಸಂದರ್ಭದಲ್ಲಿ ಅವರು ಕೊನೆಯದಾಗಿ ಅಧ್ಯಯನ ಮಾಡಿದ ಕಾಲೇಜಿನ ಮುಖ್ಯಸ್ಥರಿಂದ ಪಡೆದ ಗುಣ ಮತ್ತು ನಡವಳಿಕೆಯ ಪ್ರಮಾಣಪತ್ರಗಳು. ಆಯೋಗದಲ್ಲಿ ಉದ್ಯೋಗ ಪಡೆಯುವ ಮೊದಲು ಖಾಸಗಿ ವಲಯದಲ್ಲಿ ಸೇವೆ ಸಲ್ಲಿಸುತ್ತಿರುವವರು ಹಿಂದಿನ ಉದ್ಯೋಗದಾತರಿಂದ ಅಂತಹ ಪ್ರಮಾಣಪತ್ರವನ್ನು ಪಡೆಯಬೇಕು.

c) ವಯಸ್ಸಿನ ಧೃಢೀಕರಣವು ಪ್ರೌಢಶಾಲೆ ಪ್ರಮಾಣಪತ್ರವಾಗಿರಬೇಕು,

d) ಎಸ್.ಸಿ. (ಪ.ಜಾ), ಎಸ್.ಟಿ. (ಪ.ಪಂ), ಮತ್ತು ಒ.ಬಿ.ಸಿ. ವರ್ಗಕ್ಕೆ ಸೇರಿದ ಅಭ್ಯರ್ಥಿಗಳಾಗಿದ್ದಲ್ಲಿ ಸಮರ್ಥ ಪ್ರಾಧಿಕಾರದಿಂದ ಜಾತಿ ಪ್ರಮಾಣಪತ್ರ. ಜಾತಿಯ ಪರಿಶೀಲನೆಯು ಈ ಉದ್ದೇಶಕ್ಕಾಗಿ ಕರ್ನಾಟಕ ಸರ್ಕಾರ ರೂಪಿಸಿದ ನಿಯಮಗಳಿಗೆ ಅನುಸಾರವಾಗಿರುತ್ತದೆ.

(5) ಎಲ್ಲಾ ಅಭ್ಯರ್ಥಿಗಳು ಈ ಕೆಳಗಿನ ಪ್ರಮಾಣಪತ್ರಗಳ ಮೂಲ ದಾಖಲೆಗಳನ್ನು ಸಂದರ್ಶನದ ಸಮಯದಲ್ಲಿ ಮತ್ತು ಒಂದು ವೇಳೆ ಆಯ್ಕೆಯಾದಲ್ಲಿ ಕೆಲಸಕ್ಕೆ ಸೇರ್ಪಡೆಗೊಳ್ಳುವ ಮೊದಲು ತಕ್ಷಣವೇ ಹಾಜರುಪಡಿಸಬೇಕು:- ವಯೋಮಿತಿಯ ದಾಖಲೆಯಾಗಿ ಎಸ್.ಎಸ್.ಸಿ. / ಎಸ್.ಎಸ್.ಎಲ್.ಸಿ ಅಥವಾ ಅದರ ಸಮಾನವಾದ ಪರೀಕ್ಷೆ. ಶೈಕ್ಷಣಿಕ ವಿದ್ಯಾರ್ಹತೆ ಮತ್ತು ಅನುಭವ ಬೆಂಬಲಿಸುವ ದಾಖಲೆಗಳು. ಮೀಸಲಾತಿ ಹುದ್ದೆ ಬಯಸುವುದಾದಲ್ಲಿ ಜಾತಿ ಪ್ರಮಾಣಪತ್ರ.

(6) ಅರ್ಜಿಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಲಾಗುವುದು ಮತ್ತು ಅರ್ಹ ಅಭ್ಯರ್ಥಿಗಳನ್ನು ಉಪ-ನಿಯಮ (7) ರ ಅಡಿಯಲ್ಲಿ ರಚಿಸಲಾದ ಆಯ್ಕೆ ಸಮಿತಿಯಿಂದ ಸಂದರ್ಶನಕ್ಕೆ ಕರೆಯಲಾಗುವುದು.

(7) ಆಯ್ಕೆ ಸಮಿತಿಯಲ್ಲಿ ಈ ಕೆಳಗಿನವರು ಇರಬೇಕು, ಮುಖ್ಯವಾಗಿ:

(1) ಆಯೋಗದ ಅಧ್ಯಕ್ಷರು – ಅಧ್ಯಕ್ಷ

(2) ಆಯೋಗದಿಂದ ನಾಮನಿರ್ದೇಶನಗೊಂಡ ವ್ಯಕ್ತಿ - ಸದಸ್ಯ

(3) ಸಂಬಂಧಪಟ್ಟ ಕ್ಷೇತ್ರದಲ್ಲಿನ ಪರಿಣಿತ - ಸದಸ್ಯ

(8) ಸಂದರ್ಶನದಲ್ಲಿ ಪ್ರತಿ ಅಭ್ಯರ್ಥಿಯು ಗಳಿಸಿದ ಅಂಕಗಳ ಆಧಾರದ ಮೇಲೆ ಮತ್ತು ಸರ್ಕಾರ ಹೊರಡಿಸಿದ ಮಾರ್ಗಸೂಚಿಗಳಿಗೆ ಅನುಗುಣವಾಗಿ ಆಯ್ಕೆ ಸಮಿತಿಯು ಆಯ್ಕೆ ಪಟ್ಟಿಯನ್ನು ಸಿದ್ಧಪಡಿಸುವುದು.

(9) ಎಲ್ಲಾ ಹುದ್ದೆಗಳಿಗೆ ನೇಮಕಾತಿ ಪ್ರಧಿಕಾರವು ಆಯೋಗವೇ ಆಗಿರುತ್ತದೆ.

(10) ನೇರವಾಗಿ ನೇಮಕಗೊಂಡ ಪ್ರತಿಯೊಬ್ಬ ಅಭ್ಯರ್ಥಿಯನ್ನು ವೈದ್ಯಕೀಯ ಮಂಡಳಿಯು ತಪಾಸಣೆ ಮಾಡುವುದು ಮತ್ತು ವೈದ್ಯಕೀಯ ಮಂಡಳಿಯಿಂದ ಅರ್ಹತೆ ಪ್ರಮಾಣಪತ್ರವನ್ನು ಪಡೆದ ನಂತರವೇ ನೇಮಕಾತಿ ಮಾಡುವುದು.

(11) ಎಲ್ಲಾ ನೇಮಕಾತಿಗಳನ್ನು ಅಭ್ಯರ್ಥಿಯ ಗುಣನಡತೆ ಮತ್ತು ಹಿನ್ನೆಲೆಯನ್ನು ಪರಿಶೀಲಿಸಿದ ನಂತರವೇ ಮಾಡಲಾಗುವುದು.

(12) ಆಯೋಗದ ಕಾರ್ಯದರ್ಶಿ ಹುದ್ದೆಯನ್ನು ಹೊರತುಪಡಿಸಿ ಪ್ರತಿ ಗುತ್ತಿಗೆ ನೇಮಕಾತಿಯು ಗರಿಷ್ಠ ಮೂರು ವರ್ಷಗಳವರೆಗೆ ಇದ್ದು, ವಾರ್ಷಿಕವಾಗಿ ನವೀಕರಿಸಬಹುದಾದ ಅವಧಿಯನ್ನು ಹೊಂದಿರುತ್ತದೆ, ಮತ್ತು ಅಧಿನಿಯಮದ ಸೆಕ್ಷನ್ 8 (1) ರ ಪ್ರಕಾರ ನಿಯಂತ್ರಿಸಲಾಗುತ್ತದೆ. ಗುತ್ತಿಗೆ ಆಧಾರಿತ ನೇಮಕಾತಿಗಾಗಿ ಕರಾರನ್ನು ಅನುಬಂಧ -1 ರಲ್ಲಿ ನಿಗದಿಪಡಿಸಲಾಗಿದೆ.

## 9. ನೇಮಕಾತಿ

(1) ನೇರವಾಗಿ ನೇಮಕಗೊಳ್ಳುವ ವ್ಯಕ್ತಿಯು ಉತ್ತಮ ಆರೋಗ್ಯ ಹೊಂದಿರಬೇಕು. ನೇರವಾಗಿ ನೇಮಕಗೊಂಡ ಪ್ರತಿಯೊಬ್ಬ ಅಭ್ಯರ್ಥಿಯನ್ನು ವೈದ್ಯಕೀಯ ಮಂಡಳಿಯು ಮಾಡುವುದು ಮತ್ತು ನೇಮಕಾತಿಯನ್ನು ವೈದ್ಯಕೀಯ ಮಂಡಳಿ ನೀಡಿದ ಅರ್ಹತೆ ಪ್ರಮಾಣಪತ್ರದ ಆಧಾರದಲ್ಲಿ ಮಾಡುವುದು. ಈ ಷರತ್ತು, (i) ಗುತ್ತಿಗೆ ಆಧಾರದಲ್ಲಿ ತೆಗೆದುಕೊಳ್ಳುವ, (ii) ನಿಯೋಜನೆಯಡಿ ತೆಗೆದುಕೊಳ್ಳುವ, (iii) ಆಯೋಗಕ್ಕೆ ಸೇರುವ ಮೊದಲು ಈಗಾಗಲೇ ಸರ್ಕಾರಿ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿರುವವರಿಗೆ ಅನ್ವಯಿಸುವುದಿಲ್ಲ.

(2) ನೇಮಕವಾಗಬೇಕಾದ ಅಭ್ಯರ್ಥಿಯು, ಈ ನಿಬಂಧನೆಗಳ ಎರಡನೇ ಅನುಸೂಚಿಯಲ್ಲಿ ಪ್ರತಿ ಹುದ್ದೆಗೆ ನಿಗದಿಪಡಿಸಿರುವಂತೆ, ಅಗತ್ಯ ವಿದ್ಯಾರ್ಹತೆಗಳು ಮತ್ತು ಅನುಭವ ಹೊಂದಿರಬೇಕು. ಆದಾಗ್ಯೂ, ಸೂಕ್ತ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಾಗ, ಅದಕ್ಕೆ ಕಾರಣಗಳನ್ನು ದಾಖಲಿಸಿದ ನಂತರ ಆಯೋಗವು ಸೂಕ್ತ ಸಂದರ್ಭಗಳಲ್ಲಿ ನೇಮಕಾತಿಗಾಗಿ ಅರ್ಹತಾ ಮಾನದಂಡಗಳನ್ನು ಸಡಿಲಿಸಬಹುದು. ಎಲ್ಲಾ ಅಭ್ಯರ್ಥಿಗಳು ಕನ್ನಡದ ಜ್ಞಾನ ಹೊಂದಿರಬೇಕು.

## 10. ವೇತನ ನಿಗದಿ

(1) ಆಯ್ಕೆಯಾದ ಅಭ್ಯರ್ಥಿಗಳ ವೇತನವನ್ನು ಸಾಮಾನ್ಯವಾಗಿ ವೇತನ ಶ್ರೇಣಿಯ ಕನಿಷ್ಠ ಮೊತ್ತಕ್ಕೆ ನಿಗದಿಪಡಿಸಲಾಗುತ್ತದೆ. ಆದಾಗ್ಯೂ, ಸೂಕ್ತ ಸಂದರ್ಭಗಳಲ್ಲಿ, ಅನುಭವಿ ಅಥವಾ ಪಾಂಡಿತ್ಯವುಳ್ಳ ವ್ಯಕ್ತಿಯನ್ನು ನೇಮಕ ಮಾಡಿದ ಸಂದರ್ಭದಲ್ಲಿ, ಆ ಹುದ್ದೆಗೆ ಅನ್ವಯಿಸುವ ವೇತನ ಶ್ರೇಣಿಯಲ್ಲಿನ, ಆಯೋಗವು ಸೂಕ್ತವೆಂದು ಪರಿಗಣಿಸುವ ಹಚ್ಚಿನ ಹಂತದ ವೇತನವನ್ನು ನಿಗದಿಪಡಿಸಬಹುದು.

(2) ಗುತ್ತಿಗೆ ಆಧಾರದ ಮೇಲೆ ನೇಮಕವಾದ ವ್ಯಕ್ತಿಯ ವೇತನವನ್ನು ಆಯೋಗವು ತಾನು ನೇಮಕ ಮಾಡುವ ಹುದ್ದೆಯ ವೇತನ ಶ್ರೇಣಿಗೆ ಸಂಬಂಧಿಸಿದಂತೆ ಸೂಕ್ತವಾಗಿ ನಿರ್ಧಾರ ಮಾಡುವುದು, ಕರ್ನಾಟಕ ಸರ್ಕಾರದ ಅಡಿಯಲ್ಲಿ ಒಂದೇ ವೇತನ ಶ್ರೇಣಿಯ ಹುದ್ದೆಗಳನ್ನು ಹೊಂದಿರುವ ವ್ಯಕ್ತಿಗಳಿಗೆ ಲಭ್ಯವಾಗುವ ತುಟ್ಟಿ ಭತ್ಯೆ ಮತ್ತು ಇತರ ಪರಿಹಾರ ಭತ್ಯೆಗಳು ಹಾಗೂ ಪಿಂಚಣಿ ಲಭ್ಯತೆಯ ಅಲಭ್ಯತೆ ಮತ್ತು ಇತರ ನಿವೃತ್ತಿ ಸೌಲಭ್ಯಗಳನ್ನು ಸರಿಹೊಂದಿಸಲು ಹೆಚ್ಚುವರಿ ಮೊತ್ತವನ್ನು ನೀಡುವುದು. ಗುತ್ತಿಗೆ ಅವಧಿಯ ವಾರ್ಷಿಕ ನವೀಕರಣದ ಸಮಯದಲ್ಲಿ ಈ ವೇತನವನ್ನು, ಆಯೋಗವು ಅದೇ ಆಧಾರದ ಮೇಲೆ ಸೂಕ್ತ ರೀತಿಯಲ್ಲಿ ಪರಿಷ್ಕರಿಸಬಹುದು.

(3) ನಿಯೋಜನೆ ಮೇಲೆ ನೇಮಕಗೊಂಡ ವ್ಯಕ್ತಿಗಳು, ತಿಂಗಳಿಗೆ, ತಮ್ಮ ಮಾಸಿಕ ವೇತನದ ಪ್ರತಿಶತ ಹತ್ತರಷ್ಟು ವಿಶೇಷ ವೇತನಕ್ಕೆ ಅರ್ಹರಾಗಿರುತ್ತಾರೆ. ನಿಯೋಜನೆ ಅವಧಿಯಲ್ಲಿ, ಆ ವ್ಯಕ್ತಿಯ ಮಾತೃ ಸಂಸ್ಥೆಯಲ್ಲಿ ದೊರೆಯುತ್ತಿದ್ದ ಎಲ್ಲಾ ಸವಲತ್ತುಗಳನ್ನು ರಕ್ಷಿಸಬೇಕು. ಆದಾಗ್ಯೂ, ಮಾತೃ ಇಲಾಖೆಯು ನಿಗದಿಪಡಿಸಿದ ನಿಯೋಜನೆಯ ನಿಬಂಧನೆಗಳು ಮತ್ತು ಷರತ್ತುಗಳ ಪ್ರಕಾರ ಯಾವುದೇ ನಿಯೋಜನೆ ಭತ್ಯೆಯನ್ನು ಪಾವತಿಸಬಹುದಾದಾಗ, ಈ ವಿಶೇಷ ವೇತನವು ಪಾವತಿಯಾಗುವುದಿಲ್ಲ.

## 11. ಪರಿವೀಕ್ಷಣಾ ಅವಧಿ (Probation)

ನಿಯಮಿತ ಆಧಾರದಲ್ಲಿ ಆಯ್ಕೆಯಾದ ವ್ಯಕ್ತಿಗಳ ಪರಿವೀಕ್ಷಣಾ ಅವಧಿ ಗೆ (Probationary period) ಸಂಬಂಧಿಸಿದಂತೆ ಕರ್ನಾಟಕ ಸರ್ಕಾರದ ನಿಯಮಗಳು ಅನ್ವಯವಾಗುತ್ತವೆ.

**12. ತರಬೇತಿ**

(1) ಆಯೋಗವು ಸೂಚಿಸಿದಂತೆ ಕಛೇರಿಯ ಒಳಗೆ / ಹೊರಗೆ ನಡೆಸಲಾಗುವಂತಹ ತರಬೇತಿ ಅಥವಾ ಕೋರ್ಸ್‌ಗೆ ಪ್ರತಿಯೊಬ್ಬ ಅಧಿಕಾರಿಯೂ ಒಳಗಾಗಬೇಕಾಗುತ್ತದೆ.

(2) ಯಾವುದೇ ತರಬೇತಿ ಅಥವಾ ಕೋರ್ಸ್‌ಗೆ ಒಳಗಾಗಬೇಕಾದ ಅಧಿಕಾರಿಯು ನಿಗದಿತ ಅವಧಿಗೆ ಆಯೋಗಕ್ಕೆ ಸೇವೆ ಸಲ್ಲಿಸಲು ಕರಾರನ್ನು ಕಾರ್ಯಗತಗೊಳಿಸಬೇಕಾಗಬಹುದು, ಅದು ಪ್ರತಿ ಒಂದು ತಿಂಗಳು ಅಥವಾ ತಿಂಗಳ ಭಾಗದ ತರಬೇತಿ ಅಥವಾ ಕೋರ್ಸ್‌ನ ಅವಧಿಗೆ, 12 ತಿಂಗಳ ಸೇವೆಗೆ ಮಿತಿಗೊಳಿಸಿದಂತೆ, ಗರಿಷ್ಠ ಎರಡು ವರ್ಷಗಳ ಅವಧಿಯಾಗಿರುತ್ತದೆ. ನಿಗದಿತ ಅವಧಿಗೆ ಆಯೋಗದ ಸೇವೆ ಸಲ್ಲಿಸಲು ವಿಫಲವಾದರೆ ಅಭ್ಯರ್ಥಿಯು ತರಬೇತಿಯ ಅವಧಿಯಲ್ಲಿ ತನಗೆ ಪಾವತಿಸಿದ ಸಂಭಾವನೆಯೊಂದಿಗೆ ತರಬೇತಿಗಾಗಿ ಖರ್ಚು ಮಾಡಿದ ಮೊತ್ತವನ್ನು ಮರುಪಾವತಿಸಬೇಕಾಗುತ್ತದೆ.

(3) ತರಬೇತಿ ಯ ಅವಧಿಯಲ್ಲಿ ಒಬ್ಬ ಅಧಿಕಾರಿಯ ಮೇಲೆ ದುರ್ನಡತೆಯ ಆರೋಪಹೊರಿಸಿದಲ್ಲಿ, ಆಗ ಆತ / ಆಕೆಯನ್ನು ತರಬೇತಿಯಿಂದ ಹಿಂದಕ್ಕೆ ಕರೆಸಿ, ಸೂಕ್ತ ಶಿಸ್ತು ಕ್ರಮ ಜರುಗಿಸಲಾಗುತ್ತದೆ ಅಥವಾ ಗುತ್ತಿಗೆ ಯನ್ನು ರದ್ದುಮಾಡಲಾಗುತ್ತದೆ. ಒಂದು ವೇಳೆ ಆಯೋಗವು ನಿರ್ಧರಿಸಿದಲ್ಲಿ, ಆತ / ಆಕೆಯು ತನ್ನ ಮೇಲೆ ತರಬೇತಿಗಾಗಿ ಖರ್ಚು ಮಾಡಿರುವ ಮೊತ್ತವನ್ನು ಮರುಪಾವತಿಸಬೇಕಾಗುತ್ತದೆ.

13. **ಭವಿಷ್ಯ ನಿಧಿಗೆ ಚಂದಾದಾರಿಕೆ**

ಆಯೋಗದ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಕರ್ನಾಟಕ ಸರ್ಕಾರದ ಅಧೀನದಲ್ಲಿರುವ ಅಧಿಕಾರಿಗಳು / ಸಿಬ್ಬಂದಿಗೆ ಅನ್ವಯವಾಗುವಂತೆ, ಆಯೋಗಕ್ಕೆ ಸೇರ್ಪಡೆಯಾದ ದಿನಾಂಕದಿಂದ ಜಾರಿಗೆ ಬರುವಂತೆ ಕರ್ನಾಟಕದ ಸಾಮಾನ್ಯ ಭವಿಷ್ಯ ನಿಧಿಗೆ ಚಂದಾದಾರರಾಗಲು ಅರ್ಹರಾಗಿರುತ್ತಾರೆ.

**14. ನಿವೃತ್ತಿ ಸವಲತ್ತುಗಳು**

(1) ಆಯೋಗದಲ್ಲಿ ನಿಯಮಿತವಾಗಿ (ಪೂರ್ಣಕಾಲಿಕವಾಗಿ) ನೇಮಕಗೊಳ್ಳುವ ಸಿಬ್ಬಂದಿಗಳು ಕರ್ನಾಟಕ ಸರ್ಕಾರದ ನೌಕರರಿಗೆ ಕಾಲಕಾಲಕ್ಕೆ ಅನ್ವಯವಾಗುವಂತೆ ಪಿಂಚಣಿ ಸವಲತ್ತುಗಳನ್ನು ಪಡೆಯಲು ಅರ್ಹರಾಗಿರುತ್ತಾರೆ.

(2) ಆಯೋಗದಲ್ಲಿ ಸೇರ್ಪಡೆಗೊಳ್ಳುವ ದಿನಾಂಕಕ್ಕಿಂತ ಮೊದಲು ಭಾರತ ಸರ್ಕಾರ, ಕರ್ನಾಟಕ ಸರ್ಕಾರ ಮತ್ತು ಸಾರ್ವಜನಿಕ ವಲಯದ ಉದ್ದಿಮೆಗಳ ಅಡಿಯಲ್ಲಿ ಒಬ್ಬ ಅಧಿಕಾರಿ / ಸಿಬ್ಬಂದಿ ಸಲ್ಲಿಸಿರುವ ಪಿಂಚಣಿಯುಕ್ತ ಸೇವೆಗಳನ್ನು ಆಯೋಗವು ಸೇರಿದ ನಂತರ ಅವರು ನೀಡುವ ಸೇವೆಯ ಜೊತೆಗೆ ಪಿಂಚಣಿ ಮತ್ತು ಇತರ ನಿವೃತ್ತಿ ಸೌಲಭ್ಯಗಳನ್ನು ನೀಡುವ ಉದ್ದೇಶಕ್ಕಾಗಿ ಪರಿಗಣಿಸತಕ್ಕದ್ದು. ಪಿಂಚಣಿ ಮತ್ತು ಇತರ ನಿವೃತ್ತಿ ಸೌಲಭ್ಯಗಳ ಉದ್ದೇಶಕ್ಕಾಗಿ, ಅಂತಹ ಅಧಿಕಾರಿ ಅಥವಾ ಸಿಬ್ಬಂದಿ, ರಾಜ್ಯ ಅಥವಾ ಕೇಂದ್ರ ಸರ್ಕಾರ ಅಥವಾ ಸಾರ್ವಜನಿಕ ಕ್ಷೇತ್ರದ ಉದ್ದಿಮೆಗಳಲ್ಲಿ ನೀಡಿದ ಸೇವೆಯನ್ನು ಆಯೋಗದ ಅಡಿ ನೀಡಿದ ಸೇವೆ ಎಂದು ಪರಿಗಣಿಸಲಾಗುತ್ತದೆ.

**15. ಸೇವಾ ನಿರಂತರತೆ**

(1) ಎಲ್ಲಾ ಸೇವಾ ಸೌಲಭ್ಯಗಳಿಗಾಗಿ, ಸಿಬ್ಬಂದಿಯು ಭಾರತ ಸರ್ಕಾರ, ಕರ್ನಾಟಕ ಸರ್ಕಾರ / ಸಾರ್ವಜನಿಕ ಕ್ಷೇತ್ರದ ಉದ್ದಿಮೆಗಳಲ್ಲಿ ಸಲ್ಲಿಸಿರುವ ಸೇವಾವಧಿಯನ್ನು ನಿರಂತರ ಸೇವಾವಧಿ ಎಂದು ಪರಿಗಣಿಸಲಾಗುವುದು.

(2) ವರ್ಗಾವಣೆಯ ಮೇಲೆ ಅಥವಾ ಸರ್ಕಾರಿ / ಸಾರ್ವಜನಿಕ ವಲಯದ ಉದ್ದಿಮೆಗಳಿಂದ ಆಯೋಗದ ಸೇವೆಗೆ ಸೇರುವ ಸಿಬ್ಬಂದಿಗಳು ಆಯೋಗ ಅಥವಾ ಆಯಾ ನಾಮನಿರ್ದೇಶಿತ ಪ್ರಾಧಿಕಾರದೊಂದಿಗೆ ಸಂದರ್ಭಕ್ಕೆ ಅನುಗಣವಾಗಿ ಒಪ್ಪಂದ ಮಾಡಿಕೊಂಡು, ಸರ್ಕಾರ / ಸಾರ್ವಜನಿಕ ವಲಯದ ಉದ್ದಿಮೆಗಳಿಂದ ಅವರು ಪಡೆದಿರುವ ಸಾಲಗಳು, ಮುಂಗಡ ಮತ್ತು ಇತರ ಮೊತ್ತವನ್ನು ಮರುಪಾವತಿಸಲು ಅಥವಾ ಮೂಲ ನಿಯಮಗಳು ಮತ್ತು ಷರತ್ತುಗಳ ಪ್ರಕಾರ ಸೇರುವ ದಿನಾಂಕದಂದು ಅವರು ಬಾಕಿ ಉಳಿಸಿಕೊಂಡಿರುವ ಸರ್ಕಾರ / ಸಾರ್ವಜನಿಕ ವಲಯದ ಉದ್ದಿಮೆಗಳ ಬಾಧ್ಯೆಗಳನ್ನು ನಿರ್ವಹಿಸಲು ಬದ್ದರಾಗಿರುತ್ತಾರೆಂದು ಪರಿಗಣಿಸಲಾಗುವುದು.

**16. ಸಡಿಲಿಕೆ**

ಆಯೋಗವು ಸಾರ್ವಜನಿಕ ಹಿತದೃಷ್ಟಿಯಿಂದ ಮತ್ತು ಅದರ ಕಾರಣಗಳನ್ನು ಲಿಖಿತವಾಗಿ ದಾಖಲಿಸಿದ ನಂತರ, ಸೂಕ್ತ ಸಂದರ್ಭಗಳಲ್ಲಿ, ಹುದ್ದೆಗಳಿಗೆ ನೇಮಕಾತಿ ಮಾಡುವ ಅರ್ಹತಾ ಮಾನದಂಡಗಳನ್ನು ಒಳಗೊಂಡಂತೆ ಈ ವಿನಿಯಮಗಳ ನಿಬಂಧನೆಗಳನ್ನು ಸಡಿಲಗೊಳಿಸಬಹುದು.

**17. ಸಿಸಿಎ ಮತ್ತು ನಡತೆ ನಿಯಮಗಳ ಅನ್ವಯಿಕೆ**

ಕಾಲಕಾಲಕ್ಕೆ ತಿದ್ದುಪಡಿ ಮಾಡಿದಂತೆ ಕರ್ನಾಟಕ ಸರ್ಕಾರದ ನೌಕರರಿಗೆ ಅನ್ವಯವಾಗುವ ಕರ್ನಾಟಕ ನಾಗರಿಕ ಸೇವೆಗಳ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು ಮತ್ತು ಕರ್ನಾಟಕ ನಾಗರಿಕ ಸೇವೆಗಳ (ನಡತೆ) ನಿಯಮಗಳ ನಿಬಂಧನೆಗಳು ಆಯೋಗದ ಉದ್ಯೋಗಿಗಳಿಗೆ ಅತ್ಯಗತ್ಯವಾಗಿ (ಮ್ಯುಟಾಟಿಸ್ ಮ್ಯುಟಾಂಡಿಸ್) ಅನ್ವಯವಾಗುತ್ತವೆ. ಒಂದು ವೇಳೆ, ಮೇಲಿನ ವಿನಿಯಮಗಳಲ್ಲಿ ನಿರ್ದಿಷ್ಟವಾಗಿ ಉಲ್ಲೇಖಿಸದ ಯಾವುದೇ ಸೇವಾ ವಿಷಯಕ್ಕೆ ಸಂಬಂಧಿಸಿದಂತೆ, ಆಯೋಗವು ಸೂಕ್ತ ವಿನಿಯಮಗಳನ್ನು ಹೊರಡಿಸುವವರೆಗೆ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸೇವಾ ವಿನಿಯಮಗಳು ಆಯೋಗದ ನೌಕರರಿಗೂ ಅನ್ವಯವಾಗುತ್ತದೆ.

**18. ವ್ಯಾಖ್ಯಾನ (ಅರ್ಥವಿವರಣೆ / ವಿಶ್ಲೇಷಣೆ)**

ಈ ವಿನಿಯಮಗಳ ವ್ಯಾಖ್ಯಾನಕ್ಕೆ ಸಂಬಂಧಿಸಿದಂತೆ ಯಾವುದೇ ಪ್ರಶ್ನೆ ಉದ್ಭವಿಸಿದರೆ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಅಧ್ಯಕ್ಷರ ನಿರ್ಧಾರವೇ ಅಂತಿಮ ಎಂದು ಪರಿಗಣಿಸಲಾಗುವುದು.

**19. ತೊಂದರೆಗಳನ್ನು ನಿವಾರಿಸುವ ಅಧಿಕಾರ**

ಈ ವಿನಿಯಮಗಳ ಉಪಬಂಧಗಳನ್ನು ಜಾರಿಗೆ ತರಲು ಉದ್ಭವಿಸಬಹುದಾದ ಯಾವುದೇ ತೊಂದರೆಯನ್ನು ತೆಗೆದುಹಾಕಲು ಆಯೋಗವು ಸೂಕ್ತ ಮತ್ತು ಅಗತ್ಯವೆನಿಸುವ ಅಂತಹ ಉಪಬಂಧಗಳನ್ನು ಅಥವಾ ಅಂತಹ ನಿರ್ದೇಶನಗಳನ್ನು ಆದೇಶಗಳ ಮೂಲಕ ನೀಡಬಹುದು.

ಆಯೋಗದ ಆದೇಶದ ಮೇರೆಗೆ

**ಸಹಿ/-**

ಆಯೋಗದ ಕಾರ್ಯದರ್ಶಿ

## ವಿನಿಯಮಗಳು

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ (ನೇಮಕಾತಿ ಮತ್ತು ಸೇವಾ ಷರತ್ತುಗಳು)
ವಿನಿಯಮಗಳು, 2000

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ, ಬೆಂಗಳೂರು
ಅಧಿಸೂಚನೆ
24ನೇ ಮೇ 2000

ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾ ಅಧಿನಿಯಮ, 1999 (1999ರ ಕರ್ನಾಟಕ ಅಧಿನಿಯಮ 25) ರ 8ನೇ ಪ್ರಕರಣದ ಉಪಕಲಮು (3) ಮತ್ತು (5) ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ರಾಜ್ಯ ಸರ್ಕಾರದ ಅನುಮತಿಯೊಂದಿಗೆ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ಈ ಕೆಳಗಿನ ವಿನಿಯಮಗಳನ್ನು ಮಾಡಿರುತ್ತದೆ, ಮುಖ್ಯವಾಗಿ;

ವಿನಿಯಮಗಳು
ಮೊದಲನೇ ಅನುಸೂಚಿ
ಎರಡನೇ ಅನುಸೂಚಿ: ಆಯೋಗದ ಸಿಬ್ಬಂಧಿಗೆ ವಿದ್ಯಾರ್ಹತೆಗಳು
ಅನುಬಂಧ 1: ಒಪ್ಪಂದ

### ಮೊದಲನೇ ಅನುಸೂಚಿ

| ಕ್ರಮ ಸಂಖ್ಯೆ | ಹುದ್ದೆಯ ಹೆಸರು | ಒಟ್ಟು ಹುದ್ದೆಗಳು | ವೇತನ ಶ್ರೇಣಿ |
|---|---|---|---|
| 1 | 2 | 3 | 4 |
| 1. | ಕಾರ್ಯದರ್ಶಿ | 1 | 14960-18720 |
| 2. | ನಿರ್ದೇಶಕರು (ತಾಂತ್ರಿಕ) | 1 | 13820-17220 |
| 3. | ನಿರ್ದೇಶಕರು (ಜಕಾತಿ) | 1 | 13820-17220 |
| 4. | ಉಪನಿರ್ದೇಶಕರು (ಆಡಳಿತ) | 1 | 10620-14960 |
| 5. | ಉಪನಿರ್ದೇಶಕರು (ಉತ್ಪಾದನೆ) | 1 | 10620-14960 |
| 6. | ಉಪನಿರ್ದೇಶಕರು (ಪ್ರಸರಣ) | 1 | 10620-14960 |
| 7. | ಉಪನಿರ್ದೇಶಕರು (ವಿತರಣೆ) | 1 | 10620-14960 |
| 8. | ಉಪನಿರ್ದೇಶಕರು (ಬೇಡಿಕೆ ಮುನ್ಸೂಚನೆ) | 1 | 10620-14960 |
| 9. | ಹಿರಿಯ ಆರ್ಥಿಕ ವಿಶ್ಲೇಷಕ | 1 | 10620-14960 |
| 10. | ಹಿರಿಯ ಹಣಕಾಸು ವಿಶ್ಲೇಷಕ | 1 | 10620-14960 |
| 11. | ಉಪನಿರ್ದೇಶಕರು (ಜಕಾತಿ) | 1 | 10620-14960 |
| 12. | ಉಪನಿರ್ದೇಶಕ (ಕಾನೂನು) | 1 | 10620-14960 |
| 13. | ಸಾರ್ವಜನಿಕ ಸಂಪರ್ಕ ಅಧಿಕಾರಿ | 1 | 10620-14960 |
| 14. | ಗ್ರಾಹಕ ನ್ಯಾಯವಾದಿ (ವಕೀಲ) | 1 | 10620-14960 |
| 15. | ಸಹಾಯಕ ನಿರ್ದೇಶಕರು (ಕಾನೂನು) | 1 | 7400-13120 |
| 16. | ಸಹಾಯಕ ಕಾರ್ಯದರ್ಶಿ | 1 | 7400-13120 |
| 17. | ಲೆಕ್ಕಾಧಿಕಾರಿ | 1 | 7400-13120 |
| 18. | ವ್ಯವಸ್ಥಾಪಕರು | 1 | 5575-10620 |

| ಕ್ರಮ ಸಂಖ್ಯೆ | ಹುದ್ದೆಯ ಹೆಸರು | ಒಟ್ಟು ಹುದ್ದೆಗಳು | ವೇತನ ಶ್ರೇಣಿ |
|---|---|---|---|
| 19. | ಕನ್ನಡ ಅನುವಾದಕರು | 1 | ವೇತನ ಶ್ರೇಣಿ ರಹಿತ ಹುದ್ದೆ |
| 20. | ಸಹಾಯಕರು | 13 | 4150-7800 |
| 21. | ಆಪ್ತ ಕಾರ್ಯದರ್ಶಿಗಳು | 4 | 5575-10620 |
| 22. | ಶೀಘ್ರಲಿಪಿಗಾರರು | 10 | 3850-7050 |
| 23. | ವಾಹನ ಚಾಲಕರು | 4 | 2775-4950 |
| | **ಒಟ್ಟು** | **50** | |

## ವಿನಿಯಮಗಳು

**ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ (ನೇಮಕಾತಿ ಮತ್ತು ಸೇವಾ ಷರತ್ತುಗಳು) ವಿನಿಯಮಗಳು, 2000**

## ಎರಡನೇ ಅನುಸೂಚಿ

## ಆಯೋಗದ ನೌಕರರ ವಿದ್ಯಾರ್ಹತೆಗಳು

### 1. ಆಯೋಗದ ಕಾರ್ಯದರ್ಶಿ

**ನೇಮಕಾತಿ ವಿಧಾನ:**

ರಾಜ್ಯ ಅಥವಾ ಕೇಂದ್ರ ಸರ್ಕಾರಿ ಸೇವೆ ಅಥವಾ ರಾಜ್ಯ ಅಥವಾ ಕೇಂದ್ರ ಸರ್ಕಾರಿ ಸಂಸ್ಥೆಗಳಿಂದ ಅಧಿಕಾರಿಯನ್ನು ನಿಯೋಜಿಸುವ ಮೂಲಕ.

ನಿಯೋಜನೆ ಮೂಲಕ ನೇಮಕ ಮಾಡಲು ಸೂಕ್ತ ವ್ಯಕ್ತಿ ಲಭ್ಯವಿಲ್ಲದೇ ಇದ್ದಲ್ಲಿ, ಗುತ್ತಿಗೆ ಆಧಾರದಲ್ಲಿ ನೇಮಕ.

ನಿಯೋಜನೆ ಮೂಲಕ ಅಥವಾ ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಲು ಸೂಕ್ತ ವ್ಯಕ್ತಿ ಲಭ್ಯವಿಲ್ಲದೇ ಇದ್ದಲ್ಲಿ, ನೇರ ನೇಮಕಾತಿಯಡಿ ನೇಮಕ.

**ಕನಿಷ್ಠ ವಿದ್ಯಾರ್ಹತೆ:**

a) ಮಾನ್ಯತೆ ಪಡೆದ ವಿಶ್ವವಿದ್ಯಾನಿಲಯದಿಂದ ಪದವಿ.
b) 20 ವರ್ಷಗಳ ಎಂಜಿನಿಯರಿಂಗ್ ಅಥವಾ 15 ವರ್ಷಗಳ ಆಡಳಿತಾತ್ಮಕ ಅನುಭವ, ಅದರಲ್ಲಿ 5 ವರ್ಷಗಳು ನಿರ್ವಹಣಾ ಮಟ್ಟದಲ್ಲಿ.
c) ಸಂಕೀರ್ಣ ಕೆಲಸಗಳನ್ನು ಪರಿಹರಿಸುವ ಸಾಮರ್ಥ್ಯ ಪ್ರದರ್ಶಿಸಿರಬೇಕು.
d) ಸಾರ್ವಜನಿಕ ಸಂಬಂಧಗಳಲ್ಲಿ ಗಮನಾರ್ಹ ವೃತ್ತಿಪರ ಅನುಭವ.
e) ಉತ್ಕೃಷ್ಟ ಲಿಖಿತ ಮತ್ತು ಮೌಖಿಕ ಸಂವಹನ ಕೌಶಲಗಳು.
f) ಸರ್ಕಾರಿ ಸಂಸ್ಥೆಯಲ್ಲಿ ಕೆಲಸ ಮಾಡಿದ ಅನುಭವ.
g) ನಿಯಂತ್ರಿಕ ಕೈಗಾರಿಕೆ ಅಥವಾ ವಿದ್ಯುಚ್ಛಕ್ತಿ ಕ್ಷೇತ್ರದಲ್ಲಿನ ನಿಯಂತ್ರಣ ಸಂಸ್ಥೆಯಲ್ಲಿ ಕೆಲಸ ಮಾಡಿದ ಜ್ಞಾನ ಅಥವಾ ಅನುಭವ.

### 2. ನಿರ್ದೇಶಕರು (ತಾಂತ್ರಿಕ)

**ನೇಮಕಾತಿ ವಿಧಾನ:**

ರಾಜ್ಯ ಅಥವಾ ಕೇಂದ್ರ ಸರ್ಕಾರಿ ಸೇವೆ ಅಥವಾ ರಾಜ್ಯ ಅಥವಾ ಕೇಂದ್ರ ಸರ್ಕಾರಿ ಸಂಸ್ಥೆಗಳಿಂದ ಅಧಿಕಾರಿಯನ್ನು ನಿಯೋಜಿಸುವ ಮೂಲಕ.

ನಿಯೋಜನೆ ಮೂಲಕ ನೇಮಕ ಮಾಡಲು ಸೂಕ್ತ ವ್ಯಕ್ತಿ ಲಭ್ಯವಿಲ್ಲದೇ ಇದ್ದಲ್ಲಿ, ಗುತ್ತಿಗೆ ಆಧಾರದಲ್ಲಿ ನೇಮಕ.

ನಿಯೋಜನೆ ಮೂಲಕ ಅಥವಾ ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಲು ಸೂಕ್ತ ವ್ಯಕ್ತಿ ಲಭ್ಯವಿಲ್ಲದೇ ಇದ್ದಲ್ಲಿ, ನೇರ ನೇಮಕಾತಿಯಡಿ ನೇಮಕ.

**ಕನಿಷ್ಠ ವಿದ್ಯಾರ್ಹತೆ:**

a) ಎಲೆಕ್ಟ್ರಿಕಲ್ / ಪವರ್ / ಮೆಕ್ಯಾನಿಕಲ್ ಎಂಜಿನಿಯರಿಂಗ್‌ನಲ್ಲಿ ಪದವಿ ಹೊಂದಿರಬೇಕು.
b) 25 ವರ್ಷಗಳ ಎಂಜಿನಿಯರಿಂಗ್ ಅನುಭವ ಹಾಗೂ ಉತ್ಪಾದನೆ, ಪ್ರಸರಣ ಅಥವಾ ವಿತರಣಾ ಸಂಸ್ಥೆಗಳನ್ನು ಹೊಂದಿರುವ ಬೃಹತ್ ವಿದ್ಯುಚ್ಛಕ್ತಿ ಸಂಸ್ಥೆಗಳಲ್ಲಿ ಕನಿಷ್ಠ ಐದು ವರ್ಷಗಳ ಕಾಲ ಆಡಳಿತ ಮಟ್ಟದಲ್ಲಿ ಕೆಲಸ ಮಾಡಿದ ಅನುಭವ.
c) ಕಾರ್ಯಕ್ಷಮತೆಯ ಮಾನದಂಡಗಳ ಸ್ಥಾಪನೆ ಮತ್ತು ಕ್ಲಿಷ್ಟವಾದ ವಿಮರ್ಶೆಗಳನ್ನು ನಿರೂಪಿಸಿದ ಅನುಭವ.
d) ವಿದ್ಯುಚ್ಛಕ್ತಿ ಕಾನೂನುಗಳ ಉತ್ತಮ ಜ್ಞಾನ ಅಪೇಕ್ಷಣೀಯ.

**3. ನಿರ್ದೇಶಕರು (ಜಕಾತಿ)**

**ನೇಮಕಾತಿ ವಿಧಾನ:**

ರಾಜ್ಯ ಅಥವಾ ಕೇಂದ್ರ ಸರ್ಕಾರಿ ಸೇವೆ ಅಥವಾ ರಾಜ್ಯ ಅಥವಾ ಕೇಂದ್ರ ಸರ್ಕಾರಿ ಸಂಸ್ಥೆಗಳಿಂದ ಅಧಿಕಾರಿಯನ್ನು ನಿಯೋಜಿಸುವ ಮೂಲಕ.

ನಿಯೋಜನೆ ಮೂಲಕ ನೇಮಕ ಮಾಡಲು ಸೂಕ್ತ ವ್ಯಕ್ತಿ ಲಭ್ಯವಿಲ್ಲದೇ ಇದ್ದಲ್ಲಿ, ಗುತ್ತಿಗೆ ಆಧಾರದಲ್ಲಿ ನೇಮಕ.

ನಿಯೋಜನೆ ಮೂಲಕ ಅಥವಾ ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಲು ಸೂಕ್ತ ವ್ಯಕ್ತಿ ಲಭ್ಯವಿಲ್ಲದೇ ಇದ್ದಲ್ಲಿ, ನೇರ ನೇಮಕಾತಿಯಡಿ ನೇಮಕ.

**ಕನಿಷ್ಠ ವಿದ್ಯಾರ್ಹತೆ:**

a) ಅರ್ಥಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಅಥವಾ ಎಲೆಕ್ಟ್ರಿಕಲ್ / ಪವರ್ ಎಂಜಿನಿಯರಿಂಗ್ ಪದವಿ.
b) ವೃತ್ತಿಪರ ಅರ್ಥಶಾಸ್ತ್ರಜ್ಞನಾಗಿ ಅಥವಾ ವೃತ್ತಿಪರ ಎಂಜಿನಿಯರ್ ಆಗಿ ಹದಿನೈದು ವರ್ಷಗಳ ಅನುಭವ, ಅದರಲ್ಲಿ ಕನಿಷ್ಠ ಐದು ವರ್ಷಗಳು ವೃತ್ತಿಪರ ಸಿಬ್ಬಂದಿಯನ್ನು ನಿರ್ವಹಿಸುವಲ್ಲಿ ಅನುಭವ ಇರಬೇಕು.
c) ಆರ್ಥಿಕ ವಿಶ್ಲೇಷಣೆ, ಮಾಡೆಲಿಂಗ್ ಮತ್ತು ಸಂಖ್ಯಾಶಾಸ್ತ್ರೀಯ ತಂತ್ರಗಳ ಅನುಭವ.
d) ವಾಣಿಜ್ಯ ಉದ್ಯಮಗಳಲ್ಲಿಅನುಭವ.
e) ಸಾರ್ವಜನಿಕ ಸೇವಾ ಸಂಸ್ಥೆಗಳಲ್ಲಿ ಶುಲ್ಕ ಅಭಿವೃದ್ಧಿಪಡಿಸಿದ ಅನುಭವ.
f) ವಿಶ್ಲೇಷಣಾ ಮಾದರೀಕರಣದಲ್ಲಿ ಸಾಮರ್ಥ್ಯ ಪ್ರದರ್ಶಿಸಿರಬೇಕು.
g) ವಿದ್ಯುಚ್ಛಕ್ತಿ ಕ್ಷೇತ್ರದಲ್ಲಿನ ಅನುಭವ ಅಪೇಕ್ಷಣೀಯ.

**4. ಉಪನಿರ್ದೇಶಕರು (ಆಡಳಿತ)**

**ನೇಮಕಾತಿ ವಿಧಾನ:**

ರಾಜ್ಯ ಅಥವಾ ಕೇಂದ್ರ ಸರ್ಕಾರಿ ಸೇವೆ ಅಥವಾ ರಾಜ್ಯ ಅಥವಾ ಕೇಂದ್ರ ಸರ್ಕಾರಿ ಸಂಸ್ಥೆಗಳಿಂದ ಅಧಿಕಾರಿಯನ್ನು ನಿಯೋಜಿಸುವ ಮೂಲಕ.

ನಿಯೋಜನೆ ಮೂಲಕ ನೇಮಕ ಮಾಡಲು ಸೂಕ್ತ ವ್ಯಕ್ತಿ ಲಭ್ಯವಿಲ್ಲದೇ ಇದ್ದಲ್ಲಿ, ಗುತ್ತಿಗೆ ಆಧಾರದಲ್ಲಿ ನೇಮಕ.

ನಿಯೋಜನೆ ಮೂಲಕ ಅಥವಾ ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಲು ಸೂಕ್ತ ವ್ಯಕ್ತಿ ಲಭ್ಯವಿಲ್ಲದೇ ಇದ್ದಲ್ಲಿ, ನೇರ ನೇಮಕಾತಿಯಡಿ ನೇಮಕ.

**ಕನಿಷ್ಠ ವಿದ್ಯಾರ್ಹತೆ:**

a) ಮಾನ್ಯತೆ ಪಡೆದ ವಿಶ್ವವಿದ್ಯಾನಿಲಯದಿಂದ ಪದವಿ.
b) ಮಾನವ ಸಂಪನ್ಮೂಲ ಅಭಿವೃದ್ಧಿ ಮತ್ತು ಸಿಬ್ಬಂದಿಗೆ ಸಂಬಂಧಿಸಿದ ನಿರ್ವಹಣಾ ಮಟ್ಟದಲ್ಲಿ ಆಡಳಿತಾತ್ಮಕ ಹುದ್ದೆಯಲ್ಲಿ 15 ವರ್ಷ ಅನುಭವ.
c) ಸರ್ಕಾರಿ ಸಂಸ್ಥೆಯಲ್ಲಿ ಆಡಳಿತ ನಿರ್ವಹಿಸಿದ ಅನುಭವ.
d) ಕಂಪ್ಯೂಟರ್ ವ್ಯವಸ್ಥೆಗಳ ಜ್ಞಾನ.
e) ಸರ್ಕಾರಿ ಲೆಕ್ಕಪತ್ರ ಮತ್ತು ಮುಂಗಡ ಪತ್ರ ವಿಧಾನಗಳ ಕುರಿತು ಜ್ಞಾನ ಅಪೇಕ್ಷಣೀಯ.

**5. ಗ್ರಾಹಕ ನ್ಯಾಯವಾದಿ (ವಕೀಲ)**

**ನೇಮಕಾತಿ ವಿಧಾನ:**

ರಾಜ್ಯ ಅಥವಾ ಕೇಂದ್ರ ಸರ್ಕಾರಿ ಸೇವೆ ಅಥವಾ ರಾಜ್ಯ ಅಥವಾ ಕೇಂದ್ರ ಸರ್ಕಾರಿ ಸಂಸ್ಥೆಗಳಿಂದ ಅಧಿಕಾರಿಯನ್ನು ನಿಯೋಜಿಸುವ ಮೂಲಕ.

ನಿಯೋಜನೆ ಮೂಲಕ ನೇಮಕ ಮಾಡಲು ಸೂಕ್ತ ವ್ಯಕ್ತಿ ಲಭ್ಯವಿಲ್ಲದೇ ಇದ್ದಲ್ಲಿ, ಗುತ್ತಿಗೆ ಆಧಾರದಲ್ಲಿ ನೇಮಕ.

ನಿಯೋಜನೆ ಮೂಲಕ ಅಥವಾ ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಲು ಸೂಕ್ತ ವ್ಯಕ್ತಿ ಲಭ್ಯವಿಲ್ಲದೇ ಇದ್ದಲ್ಲಿ, ನೇರ ನೇಮಕಾತಿಯಡಿ ನೇಮಕ.

**ಕನಿಷ್ಠ ವಿದ್ಯಾರ್ಹತೆ:**

a) ಮಾನ್ಯತೆ ಪಡೆದ ವಿಶ್ವವಿದ್ಯಾನಿಲಯದಿಂದ ಕಾನೂನು ಪದವಿ.
b) ವಕೀಲಿ ವೃತ್ತಿ ನಡೆಸಲು ಅರ್ಹತೆ.
c) ಹತ್ತು ವರ್ಷಗಳ ವೃತ್ತಿಪರ ಅನುಭವ.
d) ಸಾರ್ವಜನಿಕ ಬಳಕೆ ಅಥವಾ ನಿಯಂತ್ರಕ ಕಾನೂನುಗಳಲ್ಲಿ ಅನುಭವ.
e) ವಿದ್ಯುಚ್ಛಕ್ತಿ ಕ್ಷೇತ್ರದ ಜ್ಞಾನ.
f) ಒಪ್ಪಂದ ಮತ್ತು/ ಅಥವಾ ಆಡಳಿತಾತ್ಮಕ ಕಾನೂನಿನಲ್ಲಿನ ಅನುಭವ ಅಪೇಕ್ಷಣೀಯ.

**6. ಹಿರಿಯ ಹಣಕಾಸು ವಿಶ್ಲೇಷಕ**

**ನೇಮಕಾತಿ ವಿಧಾನ:**

ರಾಜ್ಯ ಅಥವಾ ಕೇಂದ್ರ ಸರ್ಕಾರಿ ಸೇವೆ ಅಥವಾ ರಾಜ್ಯ ಅಥವಾ ಕೇಂದ್ರ ಸರ್ಕಾರಿ ಸಂಸ್ಥೆಗಳಿಂದ ಅಧಿಕಾರಿಯನ್ನು ನಿಯೋಜಿಸುವ ಮೂಲಕ.

ನಿಯೋಜನೆ ಮೂಲಕ ನೇಮಕ ಮಾಡಲು ಸೂಕ್ತ ವ್ಯಕ್ತಿ ಲಭ್ಯವಿಲ್ಲದೇ ಇದ್ದಲ್ಲಿ, ಗುತ್ತಿಗೆ ಆಧಾರದಲ್ಲಿ ನೇಮಕ.

ನಿಯೋಜನೆ ಮೂಲಕ ಅಥವಾ ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಲು ಸೂಕ್ತ ವ್ಯಕ್ತಿ ಲಭ್ಯವಿಲ್ಲದೇ ಇದ್ದಲ್ಲಿ, ನೇರ ನೇಮಕಾತಿಯಡಿ ನೇಮಕ.

**ಕನಿಷ್ಠ ವಿದ್ಯಾರ್ಹತೆ:**

a) ಲೆಕ್ಕ / ವೆಚ್ಚ ಪರಿಶೋಧಕ.
b) ವಿದ್ಯಾರ್ಹತೆ ಪಡೆದ ನಂತರ 10 ವರ್ಷಗಳ ವೃತ್ತಿಪರ ಅನುಭವ.
c) ವಿದ್ಯುಚ್ಛಕ್ತಿ ಕ್ಷೇತ್ರದ ಜ್ಞಾನ ಮತ್ತು / ಅಥವಾ ಅನುಭವ.

d) ವಾಣಿಜ್ಯ ಉದ್ಯಮಗಳಲ್ಲಿ ಅನುಭವ.
e) ಕಂಪನಿ ಕಾಯ್ದೆಗಳ ಅಡಿ ರೂಪಿತಗೊಂಡ ಉದ್ಯಮಗಳ ಲೆಕ್ಕಪರಿಶೋಧಕ ಅಗತ್ಯತೆಗಳ ಜ್ಞಾನ.
f) ಸರ್ಕಾರಿ ಸಂಸ್ಥೆಗಳ ಲೆಕ್ಕಪರಿಶೋಧಕ ಅಗತ್ಯತೆಗಳ ಜ್ಞಾನ ಅಪೇಕ್ಷಣೀಯ.

**7. ಹಿರಿಯ ಆರ್ಥಿಕ ವಿಶ್ಲೇಷಕ**

**ನೇಮಕಾತಿ ವಿಧಾನ:**

ರಾಜ್ಯ ಅಥವಾ ಕೇಂದ್ರ ಸರ್ಕಾರಿ ಸೇವೆ ಅಥವಾ ರಾಜ್ಯ ಅಥವಾ ಕೇಂದ್ರ ಸರ್ಕಾರಿ ಸಂಸ್ಥೆಗಳಿಂದ ಅಧಿಕಾರಿಯನ್ನು ನಿಯೋಜಿಸುವ ಮೂಲಕ.

ನಿಯೋಜನೆ ಮೂಲಕ ನೇಮಕ ಮಾಡಲು ಸೂಕ್ತ ವ್ಯಕ್ತಿ ಲಭ್ಯವಿಲ್ಲದೇ ಇದ್ದಲ್ಲಿ, ಗುತ್ತಿಗೆ ಆಧಾರದಲ್ಲಿ ನೇಮಕ.

ನಿಯೋಜನೆ ಮೂಲಕ ಅಥವಾ ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಲು ಸೂಕ್ತ ವ್ಯಕ್ತಿ ಲಭ್ಯವಿಲ್ಲದೇ ಇದ್ದಲ್ಲಿ, ನೇರ ನೇಮಕಾತಿಯಡಿ ನೇಮಕ.

**ಕನಿಷ್ಠ ವಿದ್ಯಾರ್ಹತೆ:**

a) ಮಾನ್ಯತೆ ಪಡೆದ ವಿಶ್ವವಿದ್ಯಾನಿಲಯದಿಂದ ಅರ್ಥಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ.
b) ಅರ್ಥಶಾಸ್ತ್ರಜ್ಞನಾಗಿ ಕನಿಷ್ಠ 10 ವರ್ಷಗಳ ವೃತ್ತಿಪರ ಅನುಭವ.
c) ಆರ್ಥಿಕ ವಿಶ್ಲೇಷಣೆ, ಮಾದರೀಕರಣ ಮತ್ತು ಸಂಖ್ಯಾಶಾಸ್ತ್ರೀಯ ತಂತ್ರಗಳಲ್ಲಿ ಸಾಮರ್ಥ್ಯ ಪ್ರದರ್ಶಿಸಿರಬೇಕು.
d) ಶುಲ್ಕ ವಿನ್ಯಾಸ ಮತ್ತು ದರ ನಿರ್ಣಯದ ಸಿದ್ಧಾಂತ ಮತ್ತು ಪ್ರಾಯೋಗಿಕ ಅಂಶಗಳ ಕುರಿತು ಬಲವಾದ ಪರಿಚಿತತೆ ಇರಬೇಕು.
e) ಲೆಕ್ಕಪರಿಶೋಧನೆ ಮತ್ತು ಹಣಕಾಸಿನ ತತ್ವಗಳ ಜ್ಞಾನ ಅಪೇಕ್ಷಣೀಯ.

**8. ಉಪನಿರ್ದೇಶಕರು (ಉತ್ಪಾದನೆ)**

**ನೇಮಕಾತಿ ವಿಧಾನ:**

ರಾಜ್ಯ ಅಥವಾ ಕೇಂದ್ರ ಸರ್ಕಾರಿ ಸೇವೆ ಅಥವಾ ರಾಜ್ಯ ಅಥವಾ ಕೇಂದ್ರ ಸರ್ಕಾರಿ ಸಂಸ್ಥೆಗಳಿಂದ ಅಧಿಕಾರಿಯನ್ನು ನಿಯೋಜಿಸುವ ಮೂಲಕ.

ನಿಯೋಜನೆ ಮೂಲಕ ನೇಮಕ ಮಾಡಲು ಸೂಕ್ತ ವ್ಯಕ್ತಿ ಲಭ್ಯವಿಲ್ಲದೇ ಇದ್ದಲ್ಲಿ, ಗುತ್ತಿಗೆ ಆಧಾರದಲ್ಲಿ ನೇಮಕ.

ನಿಯೋಜನೆ ಮೂಲಕ ಅಥವಾ ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಲು ಸೂಕ್ತ ವ್ಯಕ್ತಿ ಲಭ್ಯವಿಲ್ಲದೇ ಇದ್ದಲ್ಲಿ, ನೇರ ನೇಮಕಾತಿಯಡಿ ನೇಮಕ.

**ಕನಿಷ್ಠ ವಿದ್ಯಾರ್ಹತೆ:**

a) ಎಲೆಕ್ಟ್ರಿಕಲ್ / ಪವರ್ / ಮೆಕಾನಿಕಲ್ ಎಂಜಿನಿಯರಿಂಗ್ ನಲ್ಲಿ ಪದವಿ.
b) ಉತ್ಪಾದನೆ ಸೌಲಭ್ಯಗಳನ್ನು ಹೊಂದಿರುವ ವಿದ್ಯುಚ್ಛಕ್ತಿ ಸೇವಾ ಸಂಸ್ಥೆಯಲ್ಲಿ 10 ವರ್ಷಗಳ ಸೇವಾ ಅನುಭವ.
c) ಉತ್ಪಾದನೆಯಲ್ಲಿ ನೇರವಾಗಿ ಕೆಲಸ ಮಾಡಿದ ಅನುಭವ.
d) ವಾಣಿಜ್ಯ ವಿಷಯಗಳು, ವಿದ್ಯುತ್ ಖರೀದಿ ಒಪ್ಪಂದಗಳ ಕುರಿತ ಅನುಭವ ಅಪೇಕ್ಷಣೀಯ.

**9. ಉಪನಿರ್ದೇಶಕರು (ಪ್ರಸರಣ)**

**ನೇಮಕಾತಿ ವಿಧಾನ:**

ರಾಜ್ಯ ಅಥವಾ ಕೇಂದ್ರ ಸರ್ಕಾರಿ ಸೇವೆ ಅಥವಾ ರಾಜ್ಯ ಅಥವಾ ಕೇಂದ್ರ ಸರ್ಕಾರಿ ಸಂಸ್ಥೆಗಳಿಂದ ಅಧಿಕಾರಿಯನ್ನು ನಿಯೋಜಿಸುವ ಮೂಲಕ.

ನಿಯೋಜನೆ ಮೂಲಕ ನೇಮಕ ಮಾಡಲು ಸೂಕ್ತ ವ್ಯಕ್ತಿ ಲಭ್ಯವಿಲ್ಲದೇ ಇದ್ದಲ್ಲಿ, ಗುತ್ತಿಗೆ ಆಧಾರದಲ್ಲಿ ನೇಮಕ.

ನಿಯೋಜನೆ ಮೂಲಕ ಅಥವಾ ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಲು ಸೂಕ್ತ ವ್ಯಕ್ತಿ ಲಭ್ಯವಿಲ್ಲದೇ ಇದ್ದಲ್ಲಿ, ನೇರ ನೇಮಕಾತಿಯಡಿ ನೇಮಕ.

**ಕನಿಷ್ಠ ವಿದ್ಯಾರ್ಹತೆ:**

a) ಎಲೆಕ್ಟ್ರಿಕಲ್ / ಪವರ್ / ಮೆಕಾನಿಕಲ್ ಎಂಜಿನಿಯರಿಂಗ್ ನಲ್ಲಿ ಪದವಿ.
b) ಪ್ರಸರಣ ವ್ಯವಸ್ಥೆ ಇರುವ ವಿದ್ಯುಚ್ಛಕ್ತಿ ಸೇವಾ ಸಂಸ್ಥೆಯಲ್ಲಿ 10 ವರ್ಷಗಳ ವೃತ್ತಿಪರ ಅನುಭವ.
c) ವಾಣಿಜ್ಯ ವಿಷಯಗಳು ಮತ್ತು ವಿದ್ಯುತ್ ಖರೀದಿ ಒಪ್ಪಂದಗಳ ಕುರಿತ ಅನುಭವ.
d) ವಿದ್ಯುತ್ ಶುಲ್ಕಗಳ ವಿಚಾರಗಳ ಕುರಿತ ಪರಿಚಿತತೆ ಅಪೇಕ್ಷಣೀಯ.

**10. ಉಪನಿರ್ದೇಶಕರು (ವಿತರಣೆ)**

**ನೇಮಕಾತಿ ವಿಧಾನ:**

ರಾಜ್ಯ ಅಥವಾ ಕೇಂದ್ರ ಸರ್ಕಾರಿ ಸೇವೆ ಅಥವಾ ರಾಜ್ಯ ಅಥವಾ ಕೇಂದ್ರ ಸರ್ಕಾರಿ ಸಂಸ್ಥೆಗಳಿಂದ ಅಧಿಕಾರಿಯನ್ನು ನಿಯೋಜಿಸುವ ಮೂಲಕ.

ನಿಯೋಜನೆ ಮೂಲಕ ನೇಮಕ ಮಾಡಲು ಸೂಕ್ತ ವ್ಯಕ್ತಿ ಲಭ್ಯವಿಲ್ಲದೇ ಇದ್ದಲ್ಲಿ, ಗುತ್ತಿಗೆ ಆಧಾರದಲ್ಲಿ ನೇಮಕ.

ನಿಯೋಜನೆ ಮೂಲಕ ಅಥವಾ ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಲು ಸೂಕ್ತ ವ್ಯಕ್ತಿ ಲಭ್ಯವಿಲ್ಲದೇ ಇದ್ದಲ್ಲಿ, ನೇರ ನೇಮಕಾತಿಯಡಿ ನೇಮಕ.

**ಕನಿಷ್ಠ ವಿದ್ಯಾರ್ಹತೆ:**

a) ಎಲೆಕ್ಟ್ರಿಕಲ್ / ಪವರ್ / ಮೆಕಾನಿಕಲ್ ಎಂಜಿನಿಯರಿಂಗ್ ನಲ್ಲಿ ಪದವಿ.
b) ವಿತರಣಾ ವ್ಯವಸ್ಥೆ ಇರುವ ವಿದ್ಯುತ್ ಸೇವಾ ಸಂಸ್ಥೆಯಲ್ಲಿ 10 ವರ್ಷಗಳ ವೃತ್ತಿಪರ ಅನುಭವ.
c) ವಾಣಿಜ್ಯ ವಿಷಯಗಳು ಮತ್ತು ವಿದ್ಯುತ್ ಖರೀದಿ ಒಪ್ಪಂದಗಳ ಕುರಿತ ಅನುಭವ.
d) ವಿದ್ಯುತ್ ಶುಲ್ಕಗಳ ವಿಚಾರಗಳ ಕುರಿತ ಪರಿಚಿತತೆ ಅಪೇಕ್ಷಣೀಯ.

**11. ಉಪನಿರ್ದೇಶಕರು (ಬೇಡಿಕೆ ಮುನ್ಸೂಚನೆ)**

**ನೇಮಕಾತಿ ವಿಧಾನ:**

ರಾಜ್ಯ ಅಥವಾ ಕೇಂದ್ರ ಸರ್ಕಾರಿ ಸೇವೆ ಅಥವಾ ರಾಜ್ಯ ಅಥವಾ ಕೇಂದ್ರ ಸರ್ಕಾರಿ ಸಂಸ್ಥೆಗಳಿಂದ ಅಧಿಕಾರಿಯನ್ನು ನಿಯೋಜಿಸುವ ಮೂಲಕ.

ನಿಯೋಜನೆ ಮೂಲಕ ನೇಮಕ ಮಾಡಲು ಸೂಕ್ತ ವ್ಯಕ್ತಿ ಲಭ್ಯವಿಲ್ಲದೇ ಇದ್ದಲ್ಲಿ, ಗುತ್ತಿಗೆ ಆಧಾರದಲ್ಲಿ ನೇಮಕ.

ನಿಯೋಜನೆ ಮೂಲಕ ಅಥವಾ ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಲು ಸೂಕ್ತ ವ್ಯಕ್ತಿ ಲಭ್ಯವಿಲ್ಲದೇ ಇದ್ದಲ್ಲಿ, ನೇರ ನೇಮಕಾತಿಯಡಿ ನೇಮಕ.

**ಕನಿಷ್ಠ ವಿದ್ಯಾರ್ಹತೆ:**

a) ಎಲೆಕ್ಟ್ರಿಕಲ್ / ಪವರ್ / ಮೆಕಾನಿಕಲ್ ಎಂಜಿನಿಯರಿಂಗ್ ನಲ್ಲಿ ಪದವಿ ಅಥವಾ ಅರ್ಥಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ.
b) 10 ವರ್ಷಗಳ ವೃತ್ತಿಪರ ಅನುಭವ.
c) ಆರ್ಥಿಕ ವಿಶ್ಲೇಷಣೆ, ಮಾದರೀಕರಣ ಮತ್ತು ಸ್ಪ್ರೆಡ್ ಶೀಟ್ ಮತ್ತು ದತ್ತ ಸಂಚಯ ಕೌಶಲದಲ್ಲಿ ಸಾಮರ್ಥ್ಯ ಪ್ರದರ್ಶಿಸಿರುವುದು ಅಪೇಕ್ಷಣೀಯ.

**12. ಉಪನಿರ್ದೇಶಕರು (ಕಾನೂನು)**

**ನೇಮಕಾತಿ ವಿಧಾನ:**

ರಾಜ್ಯ ಅಥವಾ ಕೇಂದ್ರ ಸರ್ಕಾರಿ ಸೇವೆ ಅಥವಾ ರಾಜ್ಯ ಅಥವಾ ಕೇಂದ್ರ ಸರ್ಕಾರಿ ಸಂಸ್ಥೆಗಳಿಂದ ಅಧಿಕಾರಿಯನ್ನು ನಿಯೋಜಿಸುವ ಮೂಲಕ.

ನಿಯೋಜನೆ ಮೂಲಕ ನೇಮಕ ಮಾಡಲು ಸೂಕ್ತ ವ್ಯಕ್ತಿ ಲಭ್ಯವಿಲ್ಲದೇ ಇದ್ದಲ್ಲಿ, ಗುತ್ತಿಗೆ ಆಧಾರದಲ್ಲಿ ನೇಮಕ.

ನಿಯೋಜನೆ ಮೂಲಕ ಅಥವಾ ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಲು ಸೂಕ್ತ ವ್ಯಕ್ತಿ ಲಭ್ಯವಿಲ್ಲದೇ ಇದ್ದಲ್ಲಿ, ನೇರ ನೇಮಕಾತಿಯಡಿ ನೇಮಕ.

**ಕನಿಷ್ಠ ವಿದ್ಯಾರ್ಹತೆ:**

a) ಮಾನ್ಯತೆ ಪಡೆದ ವಿಶ್ವವಿದ್ಯಾನಿಲಯ / ಕಾನೂನು ಶಾಲೆಯಿಂದ ಕಾನೂನು ಪದವಿ.
b) ವಕೀಲಿ ವೃತ್ತಿ ನಡೆಸಲು ಅರ್ಹತೆ.
c) 10 ವರ್ಷಗಳ ವೃತ್ತಿಪರ ಅನುಭವ.
d) ಸಾರ್ವಜನಿಕ ಬಳಕೆ ಅಥವಾ ನಿಯಂತ್ರಕ ಕಾನೂನುಗಳಲ್ಲಿ ಅನುಭವ.
e) ವಿದ್ಯುಚ್ಛಕ್ತಿ ಕ್ಷೇತ್ರದ ಅನುಭವ ಮತ್ತು / ಅಥವಾ ಜ್ಞಾನ.
f) ನ್ಯಾಯಾಲಯದಲ್ಲಿ ಸಂಬಂಧಿತ ದಾವೆ ಹೂಡುವ ಅನುಭವ.
g) ಒಪ್ಪಂದ ಮತ್ತು / ಅಥವಾ ಆಡಳಿತಾತ್ಮಕ ಕಾನೂನಿನಲ್ಲಿ ಅನುಭವವು ಅಪೇಕ್ಷಣೀಯವಾಗಿದೆ.

**13. ಉಪನಿರ್ದೇಶಕರು (ಜಕಾತಿ) (ಅರ್ಥಶಾಸ್ತ್ರ)**

**ನೇಮಕಾತಿ ವಿಧಾನ:**

ರಾಜ್ಯ ಅಥವಾ ಕೇಂದ್ರ ಸರ್ಕಾರಿ ಸೇವೆ ಅಥವಾ ರಾಜ್ಯ ಅಥವಾ ಕೇಂದ್ರ ಸರ್ಕಾರಿ ಸಂಸ್ಥೆಗಳಿಂದ ಅಧಿಕಾರಿಯನ್ನು ನಿಯೋಜಿಸುವ ಮೂಲಕ.

ನಿಯೋಜನೆ ಮೂಲಕ ನೇಮಕ ಮಾಡಲು ಸೂಕ್ತ ವ್ಯಕ್ತಿ ಲಭ್ಯವಿಲ್ಲದೇ ಇದ್ದಲ್ಲಿ, ಗುತ್ತಿಗೆ ಆಧಾರದಲ್ಲಿ ನೇಮಕ.

ನಿಯೋಜನೆ ಮೂಲಕ ಅಥವಾ ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಲು ಸೂಕ್ತ ವ್ಯಕ್ತಿ ಲಭ್ಯವಿಲ್ಲದೇ ಇದ್ದಲ್ಲಿ, ನೇರ ನೇಮಕಾತಿಯಡಿ ನೇಮಕ.

**ಕನಿಷ್ಠ ವಿದ್ಯಾರ್ಹತೆ:**

a) ಮಾನ್ಯತೆ ಪಡೆದ ವಿಶ್ವವಿದ್ಯಾನಿಲಯದಿಂದ ಅರ್ಥಶಾಸ್ತ್ರದಲ್ಲಿ ಪದವಿ.
b) ಸರ್ಕಾರಿ ಇಲಾಖೆ ಅಥವಾ ವಾಣಿಜ್ಯ ಉದ್ಯಮದಲ್ಲಿ ಅರ್ಥಶಾಸ್ತ್ರಜ್ಞರಾಗಿ 10 ವರ್ಷಗಳ ವೃತ್ತಿಪರ ಅನುಭವ.
c) ಆರ್ಥಿಕ ವಿಶ್ಲೇಷಣೆ, ಮಾದರೀಕರಣ ಮತ್ತು ಸ್ಪ್ರೆಡ್ ಶೀಟ್ ಮತ್ತು ದತ್ತ ಸಂಚಯ ಕೌಶಲ್ಯದಲ್ಲಿ ಸಾಮರ್ಥ್ಯ ಪ್ರದರ್ಶಿಸಿರಬೇಕು.
d) ಲೆಕ್ಕಪರಿಶೋಧನೆಯ ಮತ್ತು ಆರ್ಥಿಕ ತತ್ವಗಳ ಜ್ಞಾನ.

e) ವಿದ್ಯುಚ್ಛಕ್ತಿ ಕ್ಷೇತ್ರದ ಜ್ಞಾನ ಮತ್ತು / ಅಥವಾ ಅನುಭವ ಅಪೇಕ್ಷಣೀಯ.

**14. ಸಾರ್ವಜನಿಕ ಸಂಪರ್ಕ ಅಧಿಕಾರಿ**

**ನೇಮಕಾತಿ ವಿಧಾನ:**

ರಾಜ್ಯ ಅಥವಾ ಕೇಂದ್ರ ಸರ್ಕಾರಿ ಸೇವೆ ಅಥವಾ ರಾಜ್ಯ ಅಥವಾ ಕೇಂದ್ರ ಸರ್ಕಾರಿ ಸಂಸ್ಥೆಗಳಿಂದ ಅಧಿಕಾರಿಯನ್ನು ನಿಯೋಜಿಸುವ ಮೂಲಕ.

ನಿಯೋಜನೆ ಮೂಲಕ ನೇಮಕ ಮಾಡಲು ಸೂಕ್ತ ವ್ಯಕ್ತಿ ಲಭ್ಯವಿಲ್ಲದೇ ಇದ್ದಲ್ಲಿ, ಗುತ್ತಿಗೆ ಆಧಾರದಲ್ಲಿ ನೇಮಕ.

ನಿಯೋಜನೆ ಮೂಲಕ ಅಥವಾ ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಲು ಸೂಕ್ತ ವ್ಯಕ್ತಿ ಲಭ್ಯವಿಲ್ಲದೇ ಇದ್ದಲ್ಲಿ, ನೇರ ನೇಮಕಾತಿಯಡಿ ನೇಮಕ.

**ಕನಿಷ್ಠ ವಿದ್ಯಾರ್ಹತೆ:**

a) ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಸಮೂಹ ಸಂವಹನ, ಪತ್ರಿಕೋದ್ಯಮ ಅಥವಾ ವ್ಯವಹಾರ ಅರ್ಥಶಾಸ್ತ್ರದಲ್ಲಿ ಸಂಬಂಧಿತ ವಿಭಾಗದಲ್ಲಿ ಪದವಿ ಅಥವಾ ಸ್ನಾತಕೋತ್ತರ ಡಿಪ್ಲೊಮಾ.
b) ಪತ್ರಿಕೋದ್ಯಮ (ಪತ್ರಿಕೆ, ಟಿವಿ ಅಥವಾ ರೇಡಿಯೋ) ಅಥವಾ ಸಾರ್ವಜನಿಕ ಸಂಪರ್ಕದಲ್ಲಿ 5 ವರ್ಷಗಳ ಅನುಭವ. ಅಥವಾ
c) ಪದವಿಯೊಂದಿಗೆ ಸಮಾನ ಸಂಸ್ಥೆಯಲ್ಲಿ 10 ವರ್ಷಗಳಿಗೆ ಕಡಿಮೆ ಇರದ ಅನುಭವ.
d) ಸಾರ್ವಜನಿಕ ಪ್ರಸ್ತುತಿಗಳನ್ನು ಸಿದ್ಧಪಡಿಸುವ ಮತ್ತು ತಲುಪಿಸುವ ಅನುಭವ ಅಪೇಕ್ಷಣೀಯವಾಗಿದೆ.

**15. ಸಹಾಯಕ ನಿರ್ದೇಶಕರು (ಕಾನೂನು)**

**ನೇಮಕಾತಿ ವಿಧಾನ:**

ರಾಜ್ಯ ಅಥವಾ ಕೇಂದ್ರ ಸರ್ಕಾರಿ ಸೇವೆ ಅಥವಾ ರಾಜ್ಯ ಅಥವಾ ಕೇಂದ್ರ ಸರ್ಕಾರಿ ಸಂಸ್ಥೆಗಳಿಂದ ಅಧಿಕಾರಿಯನ್ನು ನಿಯೋಜಿಸುವ ಮೂಲಕ.

ನಿಯೋಜನೆ ಮೂಲಕ ನೇಮಕ ಮಾಡಲು ಸೂಕ್ತ ವ್ಯಕ್ತಿ ಲಭ್ಯವಿಲ್ಲದೇ ಇದ್ದಲ್ಲಿ, ಗುತ್ತಿಗೆ ಆಧಾರದಲ್ಲಿ ನೇಮಕ.

ನಿಯೋಜನೆ ಮೂಲಕ ಅಥವಾ ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಲು ಸೂಕ್ತ ವ್ಯಕ್ತಿ ಲಭ್ಯವಿಲ್ಲದೇ ಇದ್ದಲ್ಲಿ, ನೇರ ನೇಮಕಾತಿಯಡಿ ನೇಮಕ.

**ಕನಿಷ್ಠ ವಿದ್ಯಾರ್ಹತೆ:**

a) ಮಾನ್ಯತೆ ಪಡೆದ ವಿಶ್ವವಿದ್ಯಾನಿಲಯದಿಂದ ಕಾನೂನಿನಲ್ಲಿ ಪದವಿ.
b) ವಕೀಲಿ ವೃತ್ತಿ ನಡೆಸಲು ಅರ್ಹತೆ
c) 5 ವರ್ಷಗಳ ವೃತ್ತಿಪರ ಅನುಭವ.
d) ಸಾರ್ವಜನಿಕ ಬಳಕೆ ಅಥವಾ ನಿಯಂತ್ರಕ ಕಾನೂನುಗಳಲ್ಲಿ ಅನುಭವ.
e) ವಿದ್ಯುಚ್ಛಕ್ತಿ ಕ್ಷೇತ್ರದ ಜ್ಞಾನ ಮತ್ತು / ಅಥವಾ ಅನುಭವ ಅಪೇಕ್ಷಣೀಯ.

**16. ಸಹಾಯಕ ಕಾರ್ಯದರ್ಶಿ**

**ನೇಮಕಾತಿ ವಿಧಾನ:**

ರಾಜ್ಯ ಅಥವಾ ಕೇಂದ್ರ ಸರ್ಕಾರಿ ಸೇವೆ ಅಥವಾ ರಾಜ್ಯ ಅಥವಾ ಕೇಂದ್ರ ಸರ್ಕಾರಿ ಸಂಸ್ಥೆಗಳಿಂದ ಅಧಿಕಾರಿಯನ್ನು ನಿಯೋಜಿಸುವ ಮೂಲಕ.

ನಿಯೋಜನೆ ಮೂಲಕ ನೇಮಕ ಮಾಡಲು ಸೂಕ್ತ ವ್ಯಕ್ತಿ ಲಭ್ಯವಿಲ್ಲದೇ ಇದ್ದಲ್ಲಿ, ಗುತ್ತಿಗೆ ಆಧಾರದಲ್ಲಿ ನೇಮಕ.

ನಿಯೋಜನೆ ಮೂಲಕ ಅಥವಾ ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಲು ಸೂಕ್ತ ವ್ಯಕ್ತಿ ಲಭ್ಯವಿಲ್ಲದೇ ಇದ್ದಲ್ಲಿ, ನೇರ ನೇಮಕಾತಿಯಡಿ ನೇಮಕ.

**ಕನಿಷ್ಠ ವಿದ್ಯಾರ್ಹತೆ:**

a) ಮಾನ್ಯತೆ ಪಡೆದ ವಿಶ್ವವಿದ್ಯಾನಿಲಯದಿಂದ ಪದವಿ.
b) ನ್ಯಾಯಾಲಯ ಆಡಳಿತದಲ್ಲಿ 5 ವರ್ಷಗಳ ಅನುಭವ.
c) ಕಾನೂನಿನಲ್ಲಿ ಪದವಿ ಅಪೇಕ್ಷಣೀಯ.

**17. ಲೆಕ್ಕಾಧಿಕಾರಿ**

**ನೇಮಕಾತಿ ವಿಧಾನ:**

ರಾಜ್ಯ ಅಥವಾ ಕೇಂದ್ರ ಸರ್ಕಾರಿ ಸೇವೆ ಅಥವಾ ರಾಜ್ಯ ಅಥವಾ ಕೇಂದ್ರ ಸರ್ಕಾರಿ ಸಂಸ್ಥೆಗಳಿಂದ ಅಧಿಕಾರಿಯನ್ನು ನಿಯೋಜಿಸುವ ಮೂಲಕ.

ನಿಯೋಜನೆ ಮೂಲಕ ನೇಮಕ ಮಾಡಲು ಸೂಕ್ತ ವ್ಯಕ್ತಿ ಲಭ್ಯವಿಲ್ಲದೇ ಇದ್ದಲ್ಲಿ, ಗುತ್ತಿಗೆ ಆಧಾರದಲ್ಲಿ ನೇಮಕ.

ನಿಯೋಜನೆ ಮೂಲಕ ಅಥವಾ ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಲು ಸೂಕ್ತ ವ್ಯಕ್ತಿ ಲಭ್ಯವಿಲ್ಲದೇ ಇದ್ದಲ್ಲಿ, ನೇರ ನೇಮಕಾತಿಯಡಿ ನೇಮಕ.

**ಕನಿಷ್ಠ ವಿದ್ಯಾರ್ಹತೆ:**

a) ವಾಣಿಜ್ಯ ವಿಷಯದಲ್ಲಿ ಪದವೀಧರ ಅಥವಾ ಎಸ್.ಎ.ಎಸ್. ಅಥವಾ ಇಂಟರ್ ಮೀಡಿಯೇಟ್ ಲೆಕ್ಕಪರಿಶೋಧಕ ಅಥವಾ ಇಂಟರ್ ಮೀಡಿಯೇಟ್ ವೆಚ್ಚ ಮತ್ತು ಕಾರ್ಯಗಳ ಪರಿಶೋಧಕ.
b) ಲೆಕ್ಕಪತ್ರದಲ್ಲಿ 5 ವರ್ಷಗಳ ಅನುಭವ.
c) ಸರ್ಕಾರಿ ಲೆಕ್ಕಪರಿಶೋಧನೆಯ ಲೆಕ್ಕಪತ್ರದಲ್ಲಿ ಅನುಭವ ಅಪೇಕ್ಷಣೀಯ.

**18. ವ್ಯವಸ್ಥಾಪಕ**

**ನೇಮಕಾತಿ ವಿಧಾನ:**

ರಾಜ್ಯ ಅಥವಾ ಕೇಂದ್ರ ಸರ್ಕಾರಿ ಸೇವೆ ಅಥವಾ ರಾಜ್ಯ ಅಥವಾ ಕೇಂದ್ರ ಸರ್ಕಾರಿ ಸಂಸ್ಥೆಗಳಿಂದ ಅಧಿಕಾರಿಯನ್ನು ನಿಯೋಜಿಸುವ ಮೂಲಕ.

ನಿಯೋಜನೆ ಮೂಲಕ ನೇಮಕ ಮಾಡಲು ಸೂಕ್ತ ವ್ಯಕ್ತಿ ಲಭ್ಯವಿಲ್ಲದೇ ಇದ್ದಲ್ಲಿ, ಗುತ್ತಿಗೆ ಆಧಾರದಲ್ಲಿ ನೇಮಕ.

ನಿಯೋಜನೆ ಮೂಲಕ ಅಥವಾ ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಲು ಸೂಕ್ತ ವ್ಯಕ್ತಿ ಲಭ್ಯವಿಲ್ಲದೇ ಇದ್ದಲ್ಲಿ, ನೇರ ನೇಮಕಾತಿಯಡಿ ನೇಮಕ.

**ಕನಿಷ್ಠ ವಿದ್ಯಾರ್ಹತೆ:**

a) ಮಾನ್ಯತೆ ಪಡೆದ ವಿಶ್ವವಿದ್ಯಾನಿಲಯದಿಂದ ಪದವಿ.
b) ಕಛೇರಿ ನಿರ್ವಹಣೆಯಲ್ಲಿ 10 ವರ್ಷಗಳ ಅನುಭವ.
c) ಸರ್ಕಾರಿ / ಸರ್ಕಾರಿ ಸಂಸ್ಥೆಯ ಅನುಭವ ಅಪೇಕ್ಷಣೀಯ.

**19. ಕನ್ನಡ ಅನುವಾದಕ**

**ನೇಮಕಾತಿ ವಿಧಾನ:**

ರಾಜ್ಯ ಸರ್ಕಾರದಿಂದ ನಿಯೋಜನೆ ಮೂಲಕ.

**ಕನಿಷ್ಠ ವಿದ್ಯಾರ್ಹತೆ:**

a) ಮಾನ್ಯತೆ ಪಡೆದ ವಿಶ್ವವಿದ್ಯಾನಿಲಯದಿಂದ ಪದವಿ.
b) ಇಂಗ್ಲಿಷ್ ನಿಂದ ಕನ್ನಡಕ್ಕೆ ಅನುವಾದ ಮಾಡಿದ 5 ವರ್ಷಗಳ ಅನುಭವ.

**20. ಸಹಾಯಕ**

**ನೇಮಕಾತಿ ವಿಧಾನ:**

ರಾಜ್ಯ / ಕೇಂದ್ರ ಸರ್ಕಾರ ಅಥವಾ ರಾಜ್ಯ / ಕೇಂದ್ರ ಸಂಸ್ಥೆಗಳ ಸಿಬ್ಬಂದಿಗಳನ್ನು ನಿಯೋಜಿಸುವ ಮೂಲಕ.

ನಿಯೋಜನೆ ಮೂಲಕ ನೇಮಕ ಮಾಡಲು ಸೂಕ್ತ ವ್ಯಕ್ತಿ ಲಭ್ಯವಿಲ್ಲದೇ ಇದ್ದಲ್ಲಿ, ಗುತ್ತಿಗೆ ಆಧಾರದಲ್ಲಿ ನೇಮಕ.

**ಕನಿಷ್ಠ ವಿದ್ಯಾರ್ಹತೆ:**

a) ಮಾನ್ಯತೆ ಪಡೆದ ವಿಶ್ವವಿದ್ಯಾನಿಲಯದಿಂದ ಯಾವುದೇ ವಿಷಯದಲ್ಲಿ ಪದವಿ ಪಡೆದಿರಬೇಕು.
b) ಟಿಪ್ಪಣಿ ಮತ್ತು ಕರಡು ರಚನೆಯಲ್ಲಿ ಸಾಕಷ್ಟು ಅರಿವು ಇರಬೇಕು.
c) ಕಂಪ್ಯೂಟರ್ ಕೌಶಲ್ಯ – ಅಭ್ಯರ್ಥಿಯು ಕಂಪ್ಯೂಟರ್ ಅಪ್ಲಿಕೇಶನ್‌ನಲ್ಲಿ ಡಿಪ್ಲೊಮಾ ಅಥವಾ ಡಿಟಿಪಿಯಲ್ಲಿ ಸರ್ಟಿಫಿಕೇಟ್ ಕೋರ್ಸ್ ಹೊಂದಿರಬೇಕು. ಆತ / ಅಕೆ ಡೇಟಾ ಎಂಟ್ರಿ, ಸ್ಪ್ರೆಡ್ ಶೀಟ್ ಗಳು ನಲ್ಲಿ ಸಾಕಷ್ಟು ಅನುಭವ ಹೊಂದಿರಬೇಕು ಮತ್ತು ಎಂಎಸ್ ವಿಂಡೋಸ್ 95/98 ಮತ್ತು ಅದಕ್ಕಿಂತ ಹೆಚ್ಚಿನದರಲ್ಲಿ ಉತ್ತಮ ಜ್ಞಾನ ಮತ್ತು ಕೆಲಸ ಮಾಡಿದ ಅನುಭವ ಹೊಂದಿರಬೇಕು. ಅಭ್ಯರ್ಥಿಯು ಕಂಪ್ಯೂಟರ್‌ನಲ್ಲಿ ಪ್ರತಿ ನಿಮಿಷಕ್ಕೆ ಕನಿಷ್ಠ 40 ಶಬ್ದಗಳನ್ನು ಮೂಡಿಸುವ ಮತ್ತು ಬೆರಳಚ್ಚು ಮಾಡಿದ ಪ್ರತಿಯ ಮುದ್ರಿಸುವ ಸಾಮರ್ಥ್ಯ ಹೊಂದಿರಬೇಕು.
d) 3 ವರ್ಷಗಳ ಅನುಭವ ಅಪೇಕ್ಷಣೀಯ.

**21. ಆಪ್ತ ಕಾರ್ಯದರ್ಶಿ**

**ನೇಮಕಾತಿ ವಿಧಾನ:**

ರಾಜ್ಯ / ಕೇಂದ್ರ ಸರ್ಕಾರ ಅಥವಾ ರಾಜ್ಯ / ಕೇಂದ್ರ ಸಂಸ್ಥೆಗಳ ಸಿಬ್ಬಂದಿಗಳನ್ನು ನಿಯೋಜಿಸುವ ಮೂಲಕ.

ನಿಯೋಜನೆ ಮೂಲಕ ನೇಮಕ ಮಾಡಲು ಸೂಕ್ತ ವ್ಯಕ್ತಿ ಲಭ್ಯವಿಲ್ಲದೇ ಇದ್ದಲ್ಲಿ, ಗುತ್ತಿಗೆ ಆಧಾರದಲ್ಲಿ ನೇಮಕ.

**ಕನಿಷ್ಠ ವಿದ್ಯಾರ್ಹತೆ:**

a) ಮಾನ್ಯತೆ ಪಡೆದ ವಿಶ್ವವಿದ್ಯಾನಿಲಯದಿಂದ ಯಾವುದೇ ವಿಷಯದಲ್ಲಿ ಪದವಿ ಪಡೆದಿರಬೇಕು.
b) ಕನಿಷ್ಠ 3 ವರ್ಷಗಳ ಕಾಲ ಸರ್ಕಾರಿ ಅಥವಾ ಸಾರ್ವಜನಿಕ ವಲಯದ ಯಾವುದೇ ವಿಭಾಗದ ಮುಖ್ಯಸ್ಥರ ಅಡಿಯಲ್ಲಿ ಆಪ್ತ ಸಹಾಯಕನಾಗಿ ಕೆಲಸ ಮಾಡಿರಬೇಕು ಮತ್ತು ಪೂರ್ಣಕಾಲಿಕ ಸೇವೆಯಲ್ಲಿ 10 ವರ್ಷಗಳ ಅನುಭವ ಹೊಂದಿರಬೇಕು. ಆತ / ಆಕೆ ಕಂಪ್ಯೂಟರ್‌ನ ಪದ ಸಂಸ್ಕರಣೆ (ವರ್ಡ್ ಪ್ರೊಸೆಸಿಂಗ್‌ನಲ್ಲಿ) ಉತ್ತಮ ಜ್ಞಾನ ಹೊಂದಿರುವುದು ಅಪೇಕ್ಷಣೀಯ.

**22. ಶೀಘ್ರಲಿಪಿಗಾರ**

**ನೇಮಕಾತಿ ವಿಧಾನ:**

ರಾಜ್ಯ / ಕೇಂದ್ರ ಸರ್ಕಾರ ಅಥವಾ ರಾಜ್ಯ / ಕೇಂದ್ರ ಸಂಸ್ಥೆಗಳ ಸಿಬ್ಬಂದಿಗಳನ್ನು ನಿಯೋಜಿಸುವ ಮೂಲಕ.

ನಿಯೋಜನೆ ಮೂಲಕ ನೇಮಕ ಮಾಡಲು ಸೂಕ್ತ ವ್ಯಕ್ತಿ ಲಭ್ಯವಿಲ್ಲದೇ ಇದ್ದಲ್ಲಿ, ಗುತ್ತಿಗೆ ಆಧಾರದಲ್ಲಿ ನೇಮಕ.

**ಕನಿಷ್ಠ ವಿದ್ಯಾರ್ಹತೆ:**

a) ಮಾನ್ಯತೆ ಪಡೆದ ವಿಶ್ವವಿದ್ಯಾನಿಲಯದಿಂದ ಯಾವುದೇ ವಿಷಯದಲ್ಲಿ ಪದವಿ ಪಡೆದಿರಬೇಕು.

b) ಕಂಪ್ಯೂಟರ್ ಕೌಶಲ್ಯ – ಅಭ್ಯರ್ಥಿಯು ಕಂಪ್ಯೂಟರ್ ಅಪ್ಲಿಕೇಶನ್‌ನಲ್ಲಿ ಡಿಪ್ಲೊಮಾ ಅಥವಾ ಡಿಟಿಪಿಯಲ್ಲಿ ಸರ್ಟಿಫಿಕೇಟ್ ಕೋರ್ಸ್ ಹೊಂದಿರಬೇಕು. ಆತ / ಅಕೆ ಡೇಟಾ ಎಂಟ್ರಿ, ಸ್ಪ್ರೆಡ್ ಶೀಟ್ ಗಳು ನಲ್ಲಿ ಸಾಕಷ್ಟು ಅನುಭವ ಹೊಂದಿರಬೇಕು ಮತ್ತು ಎಂಎಸ್ ವಿಂಡೋಸ್ 95/98 ಮತ್ತು ಅದಕ್ಕಿಂತ ಹೆಚ್ಚಿನದರಲ್ಲಿ ಉತ್ತಮ ಜ್ಞಾನ ಮತ್ತು ಕೆಲಸ ಮಾಡಿದ ಅನುಭವ ಹೊಂದಿರಬೇಕು. ಅಭ್ಯರ್ಥಿಯು ಕಂಪ್ಯೂಟರ್‌ನಲ್ಲಿ ಪ್ರತಿ ನಿಮಿಷಕ್ಕೆ ಕನಿಷ್ಠ 40 ಶಬ್ದಗಳನ್ನು ಮೂಡಿಸುವ ಮತ್ತು ಬೆರಳಚ್ಚು ಮಾಡಿದ ಪ್ರತಿಯ ಮುದ್ರಿಸುವ ಸಾಮರ್ಥ್ಯ ಹೊಂದಿರಬೇಕು.

c) ಕಾನೂನು, ವಾಣಿಜ್ಯ ಮತ್ತು ತಾಂತ್ರಿಕ ವಿಷಯಗಳನ್ನು ಒಳಗೊಂಡ ಪ್ರಕರಣಗಳನ್ನು ಗಮನಿಸುವುದು, ಕರಡು ಮಾಡುವುದು ಮತ್ತು ವಿಲೇವಾರಿ ಮಾಡುವುದರಲ್ಲಿ ಸಾಕಷ್ಟು ಅನುಭವ ಇರಬೇಕು.

d) ಶೀಘ್ರಲಿಪಿ ಪರೀಕ್ಷೆ – ಅಭ್ಯರ್ಥಿಯು ಪ್ರತಿ ನಿಮಿಷಕ್ಕೆ ಕನಿಷ್ಠ 80 ಪದಗಳ ವೇಗದೊಂದಿಗೆ ಶೀಘ್ರಲಿಪಿ ಉಕ್ತಲೇಖನ ತೆಗೆದುಕೊಳ್ಳುವ ಸಾಮರ್ಥ್ಯ ಹೊಂದಿರಬೇಕು.

e) ಶೀಘ್ರಲಿಪಿ ಮತ್ತು ಕಂಪ್ಯೂಟರ್ ಕಾರ್ಯಗಳಲ್ಲಿ 1 ವರ್ಷದ ಅನುಭವ ಅಪೇಕ್ಷಣೀಯ.

**23. ವಾಹನ ಚಾಲಕ**

**ನೇಮಕಾತಿ ವಿಧಾನ:**

ರಾಜ್ಯ / ಕೇಂದ್ರ ಸರ್ಕಾರ ಅಥವಾ ರಾಜ್ಯ / ಕೇಂದ್ರ ಸಂಸ್ಥೆಗಳ ಸಿಬ್ಬಂದಿಗಳನ್ನು ನಿಯೋಜಿಸುವ ಮೂಲಕ.

ನಿಯೋಜನೆ ಮೂಲಕ ನೇಮಕ ಮಾಡಲು ಸೂಕ್ತ ವ್ಯಕ್ತಿ ಲಭ್ಯವಿಲ್ಲದೇ ಇದ್ದಲ್ಲಿ, ಗುತ್ತಿಗೆ ಆಧಾರದಲ್ಲಿ ನೇಮಕ.

**ಟಿಪ್ಪಣಿ:** ಆಯೋಗದ ನಿಜವಾದ ಕೆಲಸ ಮತ್ತು ಅನುಭವದ ಆಧಾರದ ಮೇಲೆ ಅರ್ಹತೆ ಅಥವಾ ಅನುಭವದಲ್ಲಿ ಯಾವುದೇ ಮಾರ್ಪಾಡುಗಳು ಅಗತ್ಯವಿದ್ದಲ್ಲಿ, ಆಯೋಗವು ಹುದ್ದೆಗಳ ಜಾಹೀರಾತು ನೀಡುವಾಗ ಯಾವುದೇ ಅಗತ್ಯ ಮಾರ್ಪಾಡುಗಳನ್ನು ಮಾಡಬಹುದು.

ಆಯೋಗದ ಆದೇಶದ ಮೇರೆಗೆ

**ಸಹಿ/-**

ಆಯೋಗದ ಕಾರ್ಯದರ್ಶಿ

**ವಿನಿಯಮಗಳು**

**ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ (ನೇಮಕಾತಿ ಮತ್ತು ಸೇವಾ ಷರತ್ತುಗಳು) ವಿನಿಯಮಗಳು, 2000**

**ಅನುಬಂಧ I**

**ಒಪ್ಪಂದ**

ಈ ಒಪ್ಪಂದವನ್ನು ಮೊದಲನೇ ಪಕ್ಷದವರಾದ ಶ್ರೀ/ಶ್ರೀಮತಿ _________ ಅವರು _____________ ಅವರ ಮಗ / ಮಗಳಾಗಿದ್ದು _______________ ನೆಲೆಸುತ್ತಿದ್ದು ಎರಡು ಸಾವಿರದ ______ ರ, ____ ದಿನ ದಂದು ಎರಡನೇ ಪಕ್ಷದವರಾದ ಅಧ್ಯಕ್ಷರು, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ, ಬೆಂಗಳೂರು – 1 (ಇನ್ನು ಮುಂದೆ ಇದನ್ನು "ಆಯೋಗ" ಎಂದು ಕರೆಯಲಾಗುತ್ತದೆ, ಈ ಶಬ್ದದ ಉಲ್ಲೇಖವು ಇರುವಲ್ಲಿ, ಇದರ ಉತ್ತರಾಧಿಕಾರಿ ಮತ್ತು ನಿಯೋಜಿತರನ್ನು ಒಳಗೊಂಡಿರುತ್ತದೆ) ರವರ ನಡುವೆ ಮಾಡಲಾಗಿರುತ್ತದೆ.

ಶ್ರೀ/ಶ್ರೀಮತಿ _____ ಅವರು ಒಪ್ಪಂದದ ವಿಧಿ ಮತ್ತು ಷರತ್ತುಗಳಿಗೆ ಒಳಪಟ್ಟು ಆಯೋಗವು ಮಾಡಿರುವ ನಿಯೋಜನೆ ಕೊಡುಗೆಯನ್ನು ಸ್ವೀಕರಿಸಿದ್ದಾರೆ.

ಇದೀಗ ಈ ಕೆಳಗಿನವುಗಳನ್ನು ಪರಸ್ಪರವಾಗಿ ಒಪ್ಪಿಕೊಳ್ಳಲಾಗಿದೆ:

1. ನಿಯೋಜನೆಯು, ಕೆಲಸಕ್ಕೆ ಸೇರಿದ ದಿನದಿಂದ ________ ವರ್ಷಗಳ ಕಾಲ ಗುತ್ತಿಗೆ ಆಧಾರದಲ್ಲಿ ಇರುತ್ತದೆ ಹಾಗೂ ವಾರ್ಷಿಕವಾಗಿ ನವೀಕರಿಸಲಾಗುತ್ತದೆ. ___ ವರ್ಷಗಳ ಈ ಅವಧಿಯ ಯಾವುದೇ ಸಮಯದಲ್ಲಿ ಗುತ್ತಿಗೆಯನ್ನು ತನ್ನ ಸ್ವಂತ ವಿವೇಚನೆಯಿಂದ ಮುಕ್ತಾಯಗೊಳಿಸುವ ಆಯೋಗದ ಹಕ್ಕಿಗೆ, ಆಯೋಗದ ಕಡೆಯಿಂದ ಯಾವುದೇ ಪೂರ್ವಾಗ್ರಹವಿಲ್ಲದೆ ಮತ್ತು ನಿಗದಿತ ಅವಧಿಯ ಸೂಚನೆ ಅಥವಾ ನೋಟಿಸ್‌ಗೆ ಬದಲಾಗಿ ಪರಿಹಾರವನ್ನು ನೀಡುವ ಯಾವುದೇ ಬಾಧ್ಯತೆಯಿಲ್ಲದೆ ನಿಯೋಜನೆಯನ್ನು ರದ್ದುಗೊಳಿಸುವ ಹಕ್ಕನ್ನು ಆಯೋಗ ಹೊಂದಿರುತ್ತದೆ.
2. ಶ್ರೀ ಶ್ರೀ / ಶ್ರೀಮತಿ _____ ರವರ ಕಾರ್ಯಗಳು ಮತ್ತು ಜವಾಬ್ದಾರಿಗಳನ್ನು ಈ ಒಪ್ಪಂದದ ಅನುಬಂಧದಲ್ಲಿ ಸೂಚಿಸಲಾಗುತ್ತದೆ, ಇದನ್ನು ಯಾವಾಗಲೂ ಈ ಒಪ್ಪಂದದ ಒಂದು ಭಾಗವೆಂದು ಪರಿಗಣಿಸಲಾಗುತ್ತದೆ. ಆತ/ಆಕೆ ತನಗೆ ನೀಡಿರುವ ಕೆಲಸಗಳನ್ನು ತನ್ನ ಸಾಮರ್ಥ್ಯಕ್ಕೆ ತಕ್ಕಂತೆ ಪರಿಣತಿಯಿಂದ ಮತ್ತು ಶ್ರದ್ದೆಯಿಂದ ಮಾಡಬೇಕು ಮತ್ತು ತನ್ನ ಸೇವೆಯ ಸಂಪೂರ್ಣ ಸಮಯವನ್ನು ಆಯೋಗದ ಕೆಲಸಕ್ಕೆ ಮುಡಿಪಾಗಿಡಬೇಕು ಮತ್ತು ಆಯೋಗದಲ್ಲಿ ಸೇವೆಯಲ್ಲಿರುವಾಗ ನೇರವಾಗಿ ಅಥವಾ ಪರೋಕ್ಷವಾಗಿ ಇತರ ಯಾವುದೇ ವ್ಯಾಪಾರ, ವ್ಯವಹಾರ ಅಥವಾ ವೃತ್ತಿಯಲ್ಲಿ ತೊಡಗಿಸಿಕೊಳ್ಳಬಾರದು. ಆಯೋಗದಲ್ಲಿ ಅವನ / ಅವಳ ಸೇವೆಯ ಅವಧಿಯಲ್ಲಿ ಮತ್ತು ನಂತರದ ದಿನಗಳಲ್ಲಿ ಅವನ / ಅವಳ ಜ್ಞಾನಕ್ಕೆ ಬರುವ ಎಲ್ಲಾ ವಿಷಯಗಳನ್ನು ಅವನು / ಅವಳು ಗೌಪ್ಯವಾಗಿಡಬೇಕು. ಅವನು / ಅವಳು ಅಥವಾ ಅವನ / ಅವಳ ಭಾಗವಹಿಸುವಿಕೆ ಅಥವಾ ಅನುಮೋದನೆಯೊಂದಿಗೆ ತಯಾರಿಸಿದ ಯಾವುದೇ ದಾಖಲೆಗಳು ಮತ್ತು ಪತ್ರಗಳು ಆಯೋಗದ ಪರಿಪೂರ್ಣ ಆಸ್ತಿಯಾಗಿ ಉಳಿಯುತ್ತವೆ. ಆಯೋಗದ ಪೂರ್ವಾನುಮತಿ ಇಲ್ಲದೆ ಅವನು / ಅವಳು ಮಾಧ್ಯಮಗಳೊಂದಿಗೆ ಸಂವಹನ ನಡೆಸಬಾರದು. ಒಪ್ಪಂದದ ಅವಧಿಯಲ್ಲಿ ಆತ / ಆಕೆ ತಯಾರು ಮಾಡಿದ ಎಲ್ಲಾ ಪತ್ರಗಳು, ದಾಖಲೆಗಳು, ವರದಿಗಳು, ಸಾಫ್ಟ್ ವೇರ್ ಪ್ರೋಗ್ರಾಂ ಗಳು ಮತ್ತು ಇತರ ವಸ್ತುಗಳು ಆಯೋಗದ ಸ್ವತ್ತಾಗಿ ಉಳಿಯಲಿವೆ ಹಾಗೂ ಆಯೋಗದ ನಿರ್ದಿಷ್ಟ ಒಪ್ಪಿಗೆ / ಅನುಮತಿ ಇಲ್ಲದೆ ಬೇರೆ ಎಲ್ಲಿಯೂ ಅದನ್ನು ಬಳಸುವ ಹಕ್ಕು ಆತನಿಗೆ / ಆಕೆಗೆ ಇರುವುದಿಲ್ಲ. ತನ್ನ ಕರ್ತವ್ಯದ ಸಂದರ್ಭದಲ್ಲಿ ಯಾವುದೇ ಅನಧಿಕೃತ / ಕಾನೂನುಬಾಹಿರ ಸಾಫ್ಟ್ ವೇರ್ ಬಳಕೆಯ ಕಾರಣಕ್ಕೆ ಉದ್ಭವಿಸುವ

ಹಕ್ಕುಗಳಿಗೆ ಆಯೋಗವು ಒಳಪಡುವುದಿಲ್ಲ ಎಂಬುದನ್ನು ಆತ / ಆಕೆ ಖಾತರಿಪಡಿಸಿಕೊಳ್ಳಬೇಕು. ಅಂತಹ ಹಕ್ಕುಗಳಿಂದ ಉಂಟಾಗುವ ಎಲ್ಲಾ ಹಾನಿ / ವೆಚ್ಚಗಳು / ನಷ್ಟಗಳು ಆಯೋಗವು ನಿರ್ಧರಿಸಿದಂತೆ ಅವನ / ಅವಳ ಖಾತೆಗೇ ಸೇರುತ್ತವೆ.

3. ನಿಯಮಗಳ ಪ್ರಕಾರ ಮೂಲದಲ್ಲಿ ಆದಾಯ ತೆರಿಗೆಯನ್ನು ಕಡಿತಗೊಳಿಸುವುದಕ್ಕೆ ಒಳಪಟ್ಟು ಅವನಿಗೆ / ಅವಳಿಗೆ ವೃತ್ತಿಪರ ಶುಲ್ಕವನ್ನು ತಿಂಗಳಿಗೆ ರೂ _____ ಅನ್ನು ಪಾವತಿಸಲಾಗುವುದು. ಮತ್ತು ಸಾಗಣೆ ಮತ್ತು ದೂರವಾಣಿ ಶುಲ್ಕವಾಗಿ ರೂ._____ ಮೊತ್ತವನ್ನು ಪ್ರತಿ ತಿಂಗಳು ನೀಡಲಾಗುತ್ತದೆ. ಅವನ / ಅವಳ ಹಿಂದಿನ ಸೇವೆಯ ಕಾರಣದಿಂದ ಅವನು / ಅವಳು ಅರ್ಹರಾಗಿರುವ ಪಿಂಚಣಿ ಸೌಲಭ್ಯಗಳಿಗೆ ಸಂಬಂಧಿಸಿದಂತೆ ಯಾವುದೇ ಕಡಿತವಿಲ್ಲದೆ ಈ ಮೊತ್ತವನ್ನು ಪಾವತಿಸಲಾಗುವುದು. ಆಯೋಗವು ವಾರ್ಷಿಕವಾಗಿ ಒಪ್ಪಂದವನ್ನು ನವೀಕರಿಸುವ ಸಮಯದಲ್ಲಿ ವೃತ್ತಿಪರ ಶುಲ್ಕದ ಪರಿಷ್ಕರಣೆಯನ್ನು ನಿರ್ಧರಿಸಬಹುದು.
4. ಶ್ರೀ/ಶ್ರೀಮತಿ ________ ಅವರ ಪ್ರಧಾನ ಕಚೇರಿಯು ಬೆಂಗಳೂರಿನಲ್ಲಿನ ಆಯೋಗದ ಕಛೇರಿ ಆಗಿರುತ್ತದೆ. ಅವನು / ಅವಳು ತನ್ನ ಜವಾಬ್ದಾರಿಗಳನ್ನು ನಿರ್ವಹಿಸಲು ಮತ್ತು ಅವನ / ಅವಳಿಗೆ ನಿಯೋಜಿಸಲಾದ ಕಾರ್ಯಗಳನ್ನು ಪೂರೈಸಲು ಭಾರತದ ಯಾವುದೇ ಭಾಗ / ಭಾಗಗಳಿಗೆ ಅಥವಾ ವಿದೇಶಗಳಿಗೆ ಪ್ರಯಾಣಿಸಬೇಕಾಗಬಹುದು. ಅಂತಹ ಸಂದರ್ಭದಲ್ಲಿ ಅವನು / ಅವಳು ಪ್ರಯಾಣ ಭತ್ಯೆ ಮತ್ತು ಇತರ ಸ್ವೀಕಾರಾರ್ಹ ವೆಚ್ಚಗಳನ್ನು ಪಡೆಯಲು ಅರ್ಹರಾಗಿರುತ್ತಾರೆ.
5. ಆಯೋಗವು ಘೋಷಿಸಿರುವ ಸಾಮಾನ್ಯ ರಜಾದಿನಗಳನ್ನು ಪಡೆಯಲು ಅವನು / ಅವಳು ಅರ್ಹರಾಗಿರುತ್ತಾರೆ. ಆತನ/ಆಕೆಯ ನಿಯೋಜನೆಯ ಸಂದರ್ಭದಲ್ಲಿ ಬೇರೆ ಯಾವುದೇ ರಜೆ ನೀಡುವುದಿಲ್ಲ. ಅನಾರೋಗ್ಯದಂತಹ ಹೆಚ್ಚುವರಿ-ಸಾಮಾನ್ಯ ಸಂದರ್ಭಗಳಲ್ಲಿ, ಆಯೋಗದ ಸ್ವಂತ ವಿವೇಚನೆಯಿಂದ ಸೂಕ್ತವಾದ ರಜೆಯನ್ನು ಅನುಮತಿಸಲಾಗುವುದು.
6. ಅಪಘಾತ, ಅನಾರೋಗ್ಯ ಅಥವಾ ಇತರ ಅನಿವಾರ್ಯ ಕಾರಣಗಳನ್ನು ಹೊರತುಪಡಿಸಿ ಆಯೋಗದ ಅಧ್ಯಕ್ಷರು / ಕಾರ್ಯದರ್ಶಿಯಿಂದ ಪೂರ್ವಾನುಮತಿ ಪಡೆಯದೆ ಅವನು / ಅವಳು ತನ್ನ / ಅವಳ ಕರ್ತವ್ಯಕ್ಕೆ ಗೈರುಹಾಜರಾಗಬಾರದು ಹಾಗೂ ಅದು ಸಂಭವಿಸಿದ ನಂತರ ಸಾಧ್ಯವಾದಷ್ಟು ಬೇಗ ಆಯೋಗಕ್ಕೆ ವರದಿ ಮಾಡುವುದು.
7. ಈ ಒಪ್ಪಂದದ ನಿಯಮಗಳು ಮತ್ತು ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಶ್ರೀ / ಶ್ರೀಮತಿ _____ ವಿರುದ್ಧ ಕ್ರಮ ಕೈಗೊಳ್ಳುವ ಹಕ್ಕನ್ನು ಆಯೋಗ ಹೊಂದಿದೆ.
8. ಈ ಒಪ್ಪಂದ ಅಥವಾ ಅದಕ್ಕೆ ಸಂಬಂಧಿಸಿದಂತೆ ಈ ಒಪ್ಪಂದದ ಯಾವುದೇ ಷರತ್ತುಗಳ ವ್ಯಾಖ್ಯಾನಕ್ಕೆ ಸಂಬಂಧಿಸಿದಂತೆ ಯಾವುದೇ ವಿವಾದ / ಅಭಿಪ್ರಾಯದ ವ್ಯತ್ಯಾಸವು ಉದ್ಭವಿಸಿದರೆ, ಆಯೋಗದ ನಿರ್ಧಾರವು ಅಂತಿಮವಾಗಿರುತ್ತದೆ.
9. ಈ ಒಪ್ಪಂದಕ್ಕೆ ಸಂಬಂಧಿಸಿದಂತೆ ಉಂಟಾಗುವ ಯಾವುದೇ ಮೊಕದ್ದಮೆ ಅಥವಾ ಕಾನೂನುಕ್ರಮವನ್ನು ಬೆಂಗಳೂರಿನಲ್ಲಿರುವ ನ್ಯಾಯಾಲಯದಲ್ಲಿ ನೆರವೇರಿಸಬೇಕು.

ಮೇಲೆ ಹೆಸರಿಸಲಾದ ಪಕ್ಷಗಳು ಎರಡು ಸಾವಿರದ _________ ರ, _____ ದಿನದಂದು ಬೆಂಗಳೂರಿನಲ್ಲಿ ತಮ್ಮ ಸಹಿ ಹಾಕಿರುತ್ತಾರೆ.

ಉದ್ಯೋಗಿಯ ಸಹಿ

ಅಧ್ಯಕ್ಷರು,
ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ